ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಜುಲೈ 2023 ಮಾಸ ಪತ್ರಿಕೆ

ಸಂಪುಟ/Volume : 45
ಸಂಚಿಕೆ/Issue : 10
ಪುಟ/Pages : 12
ಬೆಲೆ/Price : ₹ 15/–

**Akhila Karnataka Shikshaka Samachar | July 2023 | Monthly**

# ಏಕಾಕ್ಷರಂ ಕಲಿಸಿದಾತಂ ಗುರು



**A Journal of Karnataka Rajya Madhyamika Shikshaka Sangha (R.)**

# ಸಂಪಾದಕೀಯ

ತನ್ನದೇ ಆದ ವೈಶಿಷ್ಟ್ಯತೆಗಳೊಂದಿಗೆ ಐದು ದಶಕಗಳಿಂದ ಕನ್ನಡ ನಾಡಿನಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಕಾರ್ಯ ಮಾಡುತ್ತ ಬಂದಿರುವ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಈ ವರ್ಷ ಕಾರ್ಯ ವಿಸ್ತಾರ ಮತ್ತು ಶೈಕ್ಷಣಿಕ ಪ್ರಗತಿಯಲ್ಲಿ ಶಿಕ್ಷಕರ ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು ವಾರ್ಷಿಕ ಯೋಜನೆಯನ್ನು ಮಾಡಿದ್ದು, ಗುರುಪರಂಪರೆ ಮತ್ತು ಗುರುವಿನ ಮಹತ್ವವನ್ನು  ತಿಳಿಯಪಡಿಸುವ ಗುರುವಂದನಾ ಕಾರ್ಯಕ್ರಮವನ್ನು ಜುಲೈ ತಿಂಗಳಲ್ಲಿ ಆಯೋಜಿಸಿದೆ.

ಹಾಗೆಯೇ  ಸಂಘಟನೆಯ ಜೀವಾಳ ಸದಸ್ಯತ್ವ. ಸದಸ್ಯತ್ವ ಅಭಿಯಾನವನ್ನು ಆಗಸ್ಟ್ ತಿಂಗಳಲ್ಲಿ ಇಪ್ಪತ್ತು ದಿನಗಳ ಕಾಲ ವಿಶೇಷ ಪ್ರಯತ್ನದ ಮೂಲಕ ಮಾಡಲು ಮತ್ತು ಮಧ್ಯದಲ್ಲಿ 6,7, ಆಗಸ್ಟ್ 2023 ರಂದು ಎರಡು ದಿನಗಳ ಕಾಲ ಮಹಾ ಸಂಪರ್ಕ ಅಭಿಯಾನ ದಿನವಾಗಿಯೂ ನಿರ್ಧರಿಸಿದೆ. ಅಕ್ಟೋಬರ್ ತಿಂಗಳಲ್ಲಿ ಸಂಘಟನಾತ್ಮಕ ಪ್ರವಾಸಕ್ಕೆ ಹೆಚ್ಚು ಒತ್ತುನೀಡಿದ್ದು "ತೀನ್ ದಿನ್ ವಿಸ್ತಾರಕ್" ಎನ್ನುವ ಪರಿಕಲ್ಪನೆಯಲ್ಲಿ ಹೆಚ್ಚು ಕಾರ್ಯಕರ್ತ ಅಧ್ಯಾಪಕರು  ಪಾಲ್ಗೊಳ್ಳುವಂತೆ ಮಾಡಲು ಈಗಿನಿಂದಲೇ ಪ್ರಯತ್ನ ಮಾಡುವಂತೆ ಕರೆನೀಡಿತು.

ನವೆಂಬರ್ ತಿಂಗಳಲ್ಲಿ ರಾಜ್ಯ ಸಮ್ಮೇಳನವನ್ನು ಶರಣರ ನಾಡು, ಕೃಷ್ಣಾನದಿಯ ತೀರದ ಬಾಗಲಕೋಟೆಯಲ್ಲಿ ಆಯೋಜಿಸಲು ಅಲ್ಲಿಯ ಕಾರ್ಯಕರ್ತರ ಅಪೇಕ್ಷೆಯಂತೆ ತೀರ್ಮಾನಿಸಿತು. ಡಿಸೆಂಬರ್ ತಿಂಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿದ್ದ ಅಧ್ಯಾಪಕಿಯರ ಮಧ್ಯದಲ್ಲಿ ಹೆಚ್ಚು ಕಾರ್ಯದ ವಿಸ್ತಾರದ ದೃಷ್ಟಿಯಿಂದ ಯೋಜಿಸಿತು. ಸಂಕಲ್ಪ ದಿನ(ಕರ್ತವ್ಯಬೋಧ ದಿವಸ್) ಆಚರಣೆಯಿಂದ ಶಿಕ್ಷಕರು ತಮ್ಮ ಕರ್ತವ್ಯ ಪ್ರಜ್ಞೆಯ ಜಾಗೃತಿಗಾಗಿ ಜನವರಿ -12ರಿಂದ 23ವರೆಗೆ (ವಿವೇಕಾನಂದರ ಜಯಂತಿಯಿಂದ ಸುಭಾಷ್ ಚಂದ್ರಭೋಸ್‌ರ ಜಯಂತಿಯವರೆಗೆ) ಕಾರ್ಯಕ್ರಮದ ಆಯೋಜನೆಗೆ ಯೋಚಿಸಿತು. ಫೆಬ್ರವರಿ ತಿಂಗಳಲ್ಲಿ ವಿಶೇಷವಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳನ್ನು ಮತ್ತು ಅಧ್ಯಾಪಕರನ್ನು ಗಮನದಲ್ಲಿ ಇಟ್ಟುಕೊಂಡು ಫೋನ್ ಇನ್ ಕಾರ್ಯಕ್ರಮ' ಆಯೋಜಿಸಲು ಯೋಜಿಸಿದ್ದು, ಈ ವರ್ಷ ಪಿಯುಸಿಯ ವಾಣಿಜ್ಯ ಮತ್ತು ವಿಜ್ಞಾನ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ರಾಜ್ಯದ ನಾಲ್ಕು ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲು ನಿರ್ಧರಿಸಿತು. ಹೊಸ ವರ್ಷ ಯುಗಾದಿಯನ್ನು ಮಾರ್ಚ್ ತಿಂಗಳಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಮಧ್ಯದಲ್ಲಿ ಅರ್ಥಪೂರ್ಣವಾಗಿ ಭಾರತೀಯ ಪರಂಪರೆಯನ್ನು ಸ್ಮರಿಸುವ ಮತ್ತು ನಿಸರ್ಗ ಹಾಗೂ ಮಾನವನ ಸಂಬಂಧವನ್ನು ತಿಳಿಸುವ ಕಾರ್ಯ ಈ ಆಚರಣೆಯಿಂದ ಮಾಡಲು ತೀರ್ಮಾನಿಸಿತು.

ಏಪ್ರಿಲ್, ಮೇ ತಿಂಗಳುಗಳಲ್ಲಿ ಜಿಲ್ಲಾ ಶಾಖೆಗಳು ಸ್ಥಳೀಯ ಅವಶ್ಯಕತೆಯನ್ನು ಗಮನದಲ್ಲಿ ಇರಿಸಿ ಶಿಕ್ಷಕರಿಗೆ ರಜಾಕಾಲೀನ ಚಟುವಟಿಕೆಗಳನ್ನು ಆಯೋಜಿಸಲು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕಾರಿಣಿಯಲ್ಲಿ ನಿರ್ಧರಿಸಲಾಯಿತು.

ಈ ಎಲ್ಲಾ ಕಾರ್ಯಕ್ರಮಗಳ ಯಶಸ್ವಿಗೆ ನಮ್ಮೆಲ್ಲರ ಶ್ರಮ, ಸಮಯದ ಅವಶ್ಯವಿದೆ. ನಾವೆಲ್ಲ ಮುಂಬರುವ  ದಿನಗಳಲ್ಲಿ ಈ ಕಾರ್ಯದಲ್ಲಿ ತೊಡಗೋಣವಲ್ಲವೇ?

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.


ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಗುರುಪೂರ್ಣಿಮಾ 3
- ಜನಸಂಖ್ಯಾ ಸ್ಫೋಟ– ಸಾಧಕ ಮತ್ತು ಬಾಧಕಗಳು 4
- ರಾಣಿರಾಸಮಣಿ 6
- ಗುರುವಂದನಾ ಕಾರ್ಯಕ್ರಮ 7
- ಪ್ರತಿಭಾ ಪುರಸ್ಕಾರದ ವಿಶೇಷತೆ ಮತ್ತು ಏಕೆ, ಯಾರಿಗೆ? 8
- ಏಕಾತ್ಮತಾ  ಸ್ತೋತ್ರ 10
- ರಾಜ್ಯ ಕಾರ್ಯಕಾರಿಣಿ ಮತ್ತು ಸಾಮಾನ್ಯಸಭೆಯ ವರದಿ 11
- ಚಿತ್ರ ಸುದ್ದಿ 12

# ಗುರುಪೂರ್ಣಿಮಾ (ಗುರುವಂದನಾ)



**ವಿದ್ವಾನ್ ನಾರಾಯಣ ಭಟ್ಟ**
**ಮುಖ್ಯ ಶಿಕ್ಷಕರು**
**ಸರ್ಕಾರಿ ಪ್ರೌಢಶಾಲೆ, ಆನೇಕಲ್**

"ಅಪಾರ ಮಹಿಮಾ ಗುರು ಮಹಿಮಾ" ಎಂಬ ಮಾತಿನಂತೆ 'ಗುರು' ಎಂಬ ಪದ ಅತ್ಯಂತ ವಿಶಿಷ್ಟವಾದುದು, ಪೂಜನೀಯವಾದುದು. 'ಗುರು' ಎಂಬ ಪದಕ್ಕೆ ಇರುವ ಶ್ರೇಷ್ಠವಾದ ಅರ್ಥವನ್ನು ಈ ಶ್ಲೋಕವು ಹೀಗೆ ವಿವರಿಸುತ್ತದೆ–

'ಗು'ಕಾರಶ್ಚಾಂಧಕಾರಃ ಸ್ಯಾತ್ 'ರು'ಕಾರಸ್ತನ್ನಿರೋಧಕಃ।
ಅಂಧಕಾರನಿರೋಧಿತ್ವಾತ್ ಗುರುರಿತ್ಯಭಿಧೀಯತೇ ॥

'ಗು' ಅಂದರೆ ಅಂಧಕಾರ, ಅಜ್ಞಾನ ಎಂದರ್ಥ. 'ರು' ಅಂದರೆ ಅದನ್ನು ನಾಶ ಮಾಡುವವನು ಎಂದರ್ಥ. ನಮ್ಮಲ್ಲಿರುವ ಅಜ್ಞಾನವನ್ನು ದೂರ ಮಾಡಿ ಬೆಳಕನ್ನು ತೋರುವವನೇ 'ಗುರು'. ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ಆಷಾಢಮಾಸದ ಹುಣ್ಣಿಮೆಯನ್ನು 'ಗುರುಪೂರ್ಣಿಮೆ' ಎಂಬುದಾಗಿ ಅತ್ಯಂತ ಶ್ರದ್ಧೆಯಿಂದ ಎಲ್ಲೆಡೆ ಆಚರಿಸುತ್ತಾ ಬಂದಿದ್ದೇವೆ.

## –: ಹಿನ್ನೆಲೆ :–

ಭಗವಾನ್ ವೇದ ವ್ಯಾಸರು ಜನ್ಮತಾಳಿದ ಶ್ರೇಷ್ಠವಾದ ದಿನ ಆಷಾಢ ಪೂರ್ಣಿಮೆ. ತಂದೆ ಪರಾಶರರು, ತಾಯಿ ಸತ್ಯವತೀ. ಇವರ ಮೂಲ ಹೆಸರು ಕೃಷ್ಣದ್ವೈಪಾಯನ. ಯಮುನಾನದೀ ದ್ವೀಪದಲ್ಲಿ ಜನಿಸಿದ ಕಾರಣ 'ದ್ವೈಪಾಯನ' ಎಂಬುದು ಇವರ ಇನ್ನೊಂದು ನಾಮಧೇಯ. ಮುಂದೆ ಅಖಂಡ ವೇದರಾಶಿಯನ್ನು ವಿಭಜಿಸಿ ನಾಲ್ಕು ವೇದಗಳನ್ನಾಗಿ ಮಾಡಿದ ಕಾರಣ 'ವೇದ ವ್ಯಾಸರು' ಎಂಬುದಾಗಿ ಪ್ರಸಿದ್ಧರಾದರು.

ಹಿಂದಿನಿಂದಲೂ ನಮ್ಮ ದೇಶ ಜ್ಞಾನಾಧಾರಿತವಾದುದು. ನಮ್ಮ ಶ್ರೇಷ್ಠವಾದ ಇತಿಹಾಸವು ಅನೇಕ ಋಷಿಮುನಿಗಳಿಂದ, ತಪಸ್ವಿಗಳಿಂದ ಮಹಾಪುರುಷರಿಂದ ಭೂಷಿತವಾಗಿದೆ. ನಮ್ಮ ಸನಾತನ ಪರಂಪರೆ ಅತ್ಯಂತ ಪರಮೋನ್ನತವಾದುದು. ನಮ್ಮ ಭಾರತೀಯರ ಜೀವನ ಸದಾ ತ್ಯಾಗಜೀವನ. ಇಂತಹ ಆದರ್ಶಗಳನ್ನು ಸಾರುವ ನಮ್ಮ ಪ್ರಾಚೀನ ಪರಂಪರೆಯ ದಿಗಂತದಲ್ಲಿ ಭಗವಾನ್ ವೇದವ್ಯಾಸರು ಅಗ್ರಮಾನ್ಯರೂ, ಮಹಾತಪಸ್ವಿಗಳೂ, ಪರಮಜ್ಞಾನಿಗಳೂ ಆಗಿದ್ದಾರೆ. ಇವರು ರಚಿಸಿದ ಅನೇಕ ಧರ್ಮಗ್ರಂಥಗಳು ಲೌಕಿಕ ಹಾಗೂ ಅಲೌಕಿಕ ಜೀವನದ ಶ್ರೇಯಸ್ಸಿಗೆ ಆಧಾರಸ್ತಂಭಗಳಾಗಿವೆ. 'ಮಾನವ ಜನ್ಮ ಬಲು ದೊಡ್ಡದು ಇದನು ಹಾಳುಮಾಡಬೇಡಿರೋ ಹುಚ್ಚಪ್ಪಗಳಿರಾ' ಎಂಬ ದಾಸವಾಣಿಯಂತೆ ನಮ್ಮ ಮನುಷ್ಯ ಜನ್ಮದ ಸಾರ್ಥಕತೆಗೆ ವೇದವ್ಯಾಸರು ರಚಿಸಿದ ಧರ್ಮಗ್ರಂಥಗಳು ಎಲ್ಲರಿಗೂ ದಾರಿದೀಪವಾಗಿವೆ.

ಮಹಾಭಾರತ, ಹದಿನೆಂಟು ಪುರಾಣಗಳು, ಭಾಗವತ, ಬ್ರಹ್ಮಸೂತ್ರ, ಉಪನಿಷತ್ ಮುಂತಾದ ಅನೇಕ ಶ್ರೇಷ್ಠ ಕೃತಿಗಳನ್ನು ರಚಿಸಿ ಲೋಕಕ್ಕೆ ಮಹದುಪಕಾರ ಮಾಡಿದ ಪ್ರಾತಃಸ್ಮರಣೀಯರಾದ ವೇದವ್ಯಾಸರನ್ನು ಸ್ಮರಿಸುವ ಪವಿತ್ರದಿನವೇ 'ಆಷಾಢ ಪೂರ್ಣಿಮಾ'. ಇದನ್ನು ವ್ಯಾಸ ಪೂರ್ಣಿಮಾ ಎಂಬುದಾಗಿಯೂ ಕರೆಯುತ್ತಾರೆ.

ಈ ಗುರು ಪೂರ್ಣಿಮಾ ದಿನವನ್ನು 'ಗುರುವಂದನಾ' ಎಂಬುದಾಗಿ ಆಚರಿಸಿ, ನಮಗೆ ಪಾಠವನ್ನು ಹೇಳಿಕೊಟ್ಟು ಸತ್ಪಥವನ್ನು ತೋರಿದ ಗುರುಗಳನ್ನು ಗೌರವಿಸುವ ಶ್ರೇಷ್ಠ ಪದ್ಧತಿ ಬೆಳೆದು ಬಂದಿದೆ. ಅಂದು ಗುರುಗಳ ಮಹಿಮೆಯನ್ನು ಮೆಲಕು ಹಾಕುತ್ತಾ, ಅವರಿಗೆ ಶ್ರದ್ಧಾಭಕ್ತಿಯಿಂದ ಗೌರವವನ್ನು ಸಮರ್ಪಿಸಿ, ಧನ್ಯತೆಯನ್ನು ಅನುಭವಿಸುವ ಶುಭ ಸಂದರ್ಭವಾಗಿದೆ. ತನ್ಮೂಲಕ ಗುರುಗಳಿಗೆ ಕೃತಜ್ಞತೆಯನ್ನು ಸಲ್ಲಿಸಿ ಶಿಷ್ಯನು ಕೃತಾರ್ಥನಾಗುತ್ತಾನೆ.

ಗುರುಗಳನ್ನು ಶಿಕ್ಷಕ, ಆಚಾರ್ಯ, ಉಪಾಧ್ಯಾಯ ಎಂಬಿತ್ಯಾದಿ ನಾಮಧೇಯಗಳಿಂದ ಸಂಬೋಧಿಸುವ ರೂಢಿ ಬೆಳೆದುಬಂದಿದೆ. ಈ ವಿವಿಧ ಶಬ್ದಗಳ ಅಂತರಾರ್ಥ ಸ್ವಲ್ಪಮಟ್ಟಿಗೆ ಭಿನ್ನವಾಗಿದ್ದರೂ ಒಟ್ಟಾರೆಯಾಗಿ ಶಿಷ್ಯವಾತ್ಸಲ್ಯದಿಂದ ಶಿಷ್ಯಪ್ರೇಮದಿಂದ ಬೋಧಿಸುವವರೇ ಶಿಕ್ಷಕರು. ಗುರುಗಳು ಎಂಬುದು ದಿಟ. ನಮ್ಮ ಭಾರತೀಯ ಶಿಕ್ಷಣಪದ್ಧತಿ ಅಧ್ಯಾತ್ಮ ಭೂಯಿಷ್ಠವಾದುದು. ಅಧ್ಯಾತ್ಮವಿಲ್ಲದ ಶಿಕ್ಷಣ ಶುಷ್ಕವಾಗಿ ಬಿಡುತ್ತದೆ. ಈ ಹಿನ್ನೆಲೆಯಲ್ಲಿ ಆಧ್ಯಾತ್ಮಿಕ ಚಿಂತನೆಗೆ ವಿಶೇಷ ಮಹತ್ವವನ್ನು ನೀಡಿದ್ದಾರೆ. ವೇದವ್ಯಾಸರು ರಚಿಸಿರುವ ಮಹಾಭಾರತದಲ್ಲಿ ಅನೇಕ ಪ್ರಸಂಗಗಳು ನ್ಯಾಯ, ನೀತಿ. ಧರ್ಮಾಧರ್ಮಗಳ ವಿವೇಕ, ಕರ್ತವ್ಯಪಾಲನೆ ಮುಂತಾದ ಶ್ರೇಷ್ಠ ಜೀವನದ ಮೌಲ್ಯಗಳನ್ನು ಬೋಧಿಸುತ್ತವೆ. ಉದಾಹರಣೆಗೆ ಯಮರಾಜನು ಯಕ್ಷನ ರೂಪದಲ್ಲಿ ಧರ್ಮರಾಜನಿಗೆ ಕೇಳಿದ ಸಕಲಪ್ರಶ್ನೆಗಳೂ ಸಹ ನಮ್ಮ ಜೀವನಪದ್ಧತಿಗೆ ಪೂರಕವಾಗಿವೆ. ಹೀಗೆ ವ್ಯಾಸವಿರಚಿತ ಧರ್ಮಗ್ರಂಥಗಳು ಆಧ್ಯಾತ್ಮಿಕ ವಿದ್ಯೆಯನ್ನು ಪಡೆಯಲು ಸಹಕಾರಿಯಾಗಿವೆ.

## –: ಇಂದು ವೇದವ್ಯಾಸರ ಪ್ರಸ್ತುತತೆ :–

ಎಂದಿಗಿಂತಲೂ ಇಂದು ವೇದವ್ಯಾಸರ ಜೀವನ, ಉಪದೇಶ ಅತ್ಯಂತ ಪ್ರಸ್ತುತತೆಯನ್ನು ಹೊಂದಿದೆ. ಏಕೆಂದರೆ ಇಂದಿನ ಶಿಕ್ಷಣಪದ್ಧತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಸನ್ಮಾರ್ಗಕ್ಕೆ ಕರೆದೊಯ್ಯುವ ದಾರಿ ಅಷ್ಟು ಸುಗಮವಾಗಿಲ್ಲ. ಅನೇಕ ಬಾಹ್ಯ ಆಕರ್ಷಣೆಗಳು ವಿದ್ಯಾರ್ಥಿಯ ಚಿತ್ತವನ್ನು ಕಲುಷಿತಗೊಳಿಸಿವೆ. ವಿದ್ಯಾರ್ಥಿಯು ವಿದ್ಯಾರ್ಜನೆಗೆ ಮಹತ್ವವನ್ನು ಕೊಡುವ ಬದಲು, ಬಾಲ್ಯದಲ್ಲಿಯೇ ಹಣ ಸಂಪಾದನೆಯೆಂಬ ಮರೀಚಿಕೆಯ ಬೆನ್ನಹತ್ತಿ ಓಡುತ್ತಿದ್ದಾನೆ. ಸ್ವಾರ್ಥವೆಂಬ ಬಲೆಗೆ ಬೀಳುತ್ತಿದ್ದಾನೆ. ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಶಿಕ್ಷಕರು ಶಿಷ್ಯನಲ್ಲಿರುವ ಎಲ್ಲಾ ದೋಷಗಳನ್ನು ನಿವಾರಿಸಿ, ಆತನಿಗೆ ಉತ್ತಮ ಸಂಸ್ಕಾರವನ್ನು ನೀಡಬೇಕಿದೆ. ಮಹಾಭಾರತ, ರಾಮಾಯಣ, ಭಗವದ್ಗೀತೆ. ಉಪನಿಷತ್ ಮುಂತಾದ ಶ್ರೇಷ್ಠ ಗ್ರಂಥಗಳ ಸಾರವನ್ನು ಬೋಧಿಸಬೇಕಾಗಿದೆ.ಪರೋಪಕಾರ, ಹಿರಿಯರಲ್ಲಿ ಶ್ರದ್ಧಾಭಕ್ತಿ, ಜೀವನದಲ್ಲಿ ಭರವಸೆ, ಸದಾಚಾರ, ಸತ್ಸಂಗ, ಉತ್ತಮ ಗ್ರಂಥಾಧ್ಯಯನ, ಸನ್ಮಿತ್ರರ ಜೊತೆ ಸಹವಾಸ, ಕಠಿಣ ಪರಿಶ್ರಮದಿಂದ ಉನ್ನತ ಸಾಧನೆ, ಜೀವನದಲ್ಲಿ ಮಹತ್ತರವಾದ ಸ್ಥಾನ ಪಡೆಯಬೇಕೆಂಬ ಛಲ–ಹಂಬಲಗಳ ಬಗ್ಗೆ ಬೋಧಿಸಿ, ವೇದವ್ಯಾಸರ ಜೀವನಾದರ್ಶಗಳನ್ನು, ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಪರಿಚಯಿಸುವ ಅಗತ್ಯವಿದೆ.

ಒಟ್ಟಿನಲ್ಲಿ ಮಹಾಭಾರತದ ಸಾರವೇನೆಂದರೆ "ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್" ಎಂಬುದಾಗಿದೆ. ಇಂತಹ ಪೂಜ್ಯಗ್ರಂಥಗಳನ್ನು ದಯಪಾಲಿಸಿದ ಪರಮಜ್ಞಾನಿಗಳಾದ, ಶ್ರೇಷ್ಠ ದಾರ್ಶನಿಕರಾದ, ಲೋಕೋಪಕಾರ ಮಾಡಿದ ಕರುಣಾಮಯಿ ಭಗವಾನ್ ವೇದವ್ಯಾಸರನ್ನು ಸದಾ ಸ್ಮರಿಸೋಣ. ನಮ್ಮಲ್ಲಿರುವ ಅಜ್ಞಾನವನ್ನು ದೂರ ಮಾಡಿ ಸುಜ್ಞಾನವನ್ನು ದಯಪಾಲಿಸು ಎಂಬುದಾಗಿ ಪ್ರಾರ್ಥಿಸೋಣ. ॥ ವಂದೇ ಗುರುಪರಂಪರಾಮ್ ॥ ●

**ಗುರು ಸೂರ್ಯನಿಗಿಂತ ದೊಡ್ಡವನು. – ನೀತಿಮಂಜರಿ**

# ಜನಸಂಖ್ಯಾ ಸ್ಫೋಟ– ಸಾಧಕ ಮತ್ತು ಬಾಧಕಗಳು

**ಡಾ॥ ಲೋಕೇಶ್**
**ಮುಖ್ಯಸ್ಥರು & ಸಂಯೋಜನಾಧಿಕಾರಿಗಳು**
**'ಶಿಕ್ಷಣ ವಿಭಾಗ', NMKRV ಮಹಿಳಾ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು**



ಮಾನವ ಎಲ್ಲ ಸಂಪತ್ತಿನ ಸೃಷ್ಟಿಕರ್ತ. ಮನುಷ್ಯನಿಲ್ಲದಿದ್ದರೆ ಬೇರೆ ಎಲ್ಲ ರೀತಿಯ ಸಂಪತ್ತು ವ್ಯರ್ಥ ಎಂದು ಕಾರ್ಲ್ ಮಾರ್ಕ್ಸ್ ಹೇಳಿದ್ದಾರೆ. ಮಾರ್ಕ್ಸ್‌ನ ಪ್ರಕಾರ ಎಲ್ಲಾ ಅಭಿವೃದ್ಧಿಯ ಕೇಂದ್ರವೇ 'ಮಾನವ'. ಮನುಷ್ಯ ಸಂಪತ್ತನ್ನು ಉತ್ಪಾದಿಸುತ್ತಾನೆ, ಅಂತಹ ಸಂಪತ್ತು ಮನುಕುಲದ ಪುರೋಭಿವೃದ್ಧಿಗೆ ಸಹಾಯಕ ಎಂದಿದ್ದಾನೆ. ತನ್ನ ಮಾರ್ಕ್ಸ್ ಸಿದ್ಧಾಂತದಲ್ಲಿ ಜನಸಂಖ್ಯಾ ಬೆಳವಣಿಗೆ ಮತ್ತು ರಾಷ್ಟ್ರದ ಆರ್ಥಿಕ ವ್ಯವಸ್ಥೆ ಹೇಗೆ ಅವಿನಾಭಾವ ಸಂಬಂಧ ಹೊಂದಿದೆ ಎಂಬುದನ್ನು ತಿಳಿಸಿದ್ದಾನೆ. ಜನಸಂಖ್ಯಾ ಸಿದ್ಧಾಂತದ ಪಿತಾಮಹ ಥಾಮಸ್ ರಾಬರ್ಟ್ ಮಾಲ್ತಸ್ ಕ್ರಿ.ಶ 1798ರಲ್ಲಿ ಮಂಡಿಸಿದ 'ಜನಸಂಖ್ಯಾ ತತ್ವ' ಎಂಬ ಪ್ರಬಂಧದಲ್ಲಿ ಜನಸಂಖ್ಯಾ ಬೆಳವಣಿಗೆಯಿಂದ ಉಂಟಾಗಬಹುದಾದ ಪ್ರತಿಕೂಲತೆಗಳ ಬಗ್ಗೆ ವಿವರಿಸಿದ್ದಾನೆ.

ರಾಷ್ಟ್ರದ ಸಮಗ್ರ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಪಾತ್ರ ಅತ್ಯಂತ ಮಹತ್ವವೆನಿಸಿದೆ. ಆದರೆ ಜನಸಂಖ್ಯಾ ಸ್ಫೋಟ ಸಂಭವಿಸಿದರೆ ಅದರಿಂದ ಹೆಚ್ಚು ಹಾನಿ ಉಂಟಾಗುತ್ತದೆ. ಭಾರತದಲ್ಲೂ ಜನಸಂಖ್ಯಾ ಸ್ಫೋಟ ಸಂಭವಿಸಿರುವುದು ದುರಾದೃಷ್ಟವೇ ಸರಿ! ಒಂದು ಭೌಗೋಳಿಕ ಪ್ರದೇಶದ ಜನರ ಸಂಖ್ಯೆ ಅತೀ ಕಡಿಮೆ ಅವಧಿಯಲ್ಲಿ ತ್ವರಿತವಾಗಿ ಹೆಚ್ಚಾಗುವುದನ್ನು ಜನಸಂಖ್ಯಾ ಸ್ಫೋಟ ಎನ್ನುತ್ತೇವೆ. ಜನಸಂಖ್ಯಾ ಸ್ಫೋಟದ ಸಾಧಕ– ಬಾಧಕಗಳನ್ನು ಜನಸಾಮಾನ್ಯರಿಗೆ ತಿಳಿಸಿ ಅರಿವು ಮೂಡಿಸಲು ಪ್ರತಿವರ್ಷ ಜುಲೈ 11 ರಂದು ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತದೆ.

ಪ್ರಸ್ತುತ ಜಗತ್ತಿನ ಜನಸಂಖ್ಯೆ 788.94 ಕೋಟಿ. ಇದರಲ್ಲಿ ಭಾರತದ ಪಾಲು ಶೇಕಡಾ 17ರಷ್ಟು, ಅಂದರೆ 140.76 ಕೋಟಿ. ಇಷ್ಟು ಜನಸಂಖ್ಯೆ ಭಾರತದ 3.28 ಮಿಲಿಯನ್ ಚದುರ ಕಿಲೋಮೀಟರ್‌ಗಳ ಭೌಗೋಳಿಕ ಪ್ರದೇಶದಲ್ಲಿ ಅಸಮವಾಗಿ ಹಂಚಿಕೊಂಡಿದೆ. 2001ರ ಜನಗಣತಿ ಪ್ರಕಾರ ಉತ್ತರ ಪ್ರದೇಶ ಅತ್ಯಂತ ಹೆಚ್ಚು ಜನಸಂಖ್ಯೆ (166 ಮಿಲಿಯನ್) ಹೊಂದಿರುವ ರಾಜ್ಯ. ಹಾಗೆ ಸಿಕ್ಕಿಂ (0.5ಮಿಲಿಯನ್) ಮತ್ತು ಲಕ್ಷದ್ವೀಪ (60000) ಜನಸಂಖ್ಯೆ ಹೊಂದಿದೆ. ಭಾರತದ ಅರ್ಧ ಜನಸಂಖ್ಯೆ ಐದು ರಾಜ್ಯಗಳಲ್ಲಿ ಹಂಚಿಹೋಗಿದೆ. ಅವುಗಳೆಂದರೆ ಮಹಾರಾಷ್ಟ್ರ, ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ ಮತ್ತು ಆಂಧ್ರಪ್ರದೇಶ.

2023ರಲ್ಲಿ ಭಾರತದ ಒಟ್ಟು ಜನಸಂಖ್ಯೆ 142.8ಕೋಟಿ ಇದ್ದು ಜಗತ್ತಿನ ಅತ್ಯಂತ ಜನಸಾಂದ್ರತೆ ಹೊಂದಿರುವ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ. ಚೀನಾದ ಒಟ್ಟು ಜನಸಂಖ್ಯೆ 142.57 ರಷ್ಟಿದೆ. ಶೇಕಡಾ 65% ಭಾರತೀಯ ಜನಸಂಖ್ಯೆ 35 ವರ್ಷ ಒಳಗಿನ ಯುವಕ ಮತ್ತು ಯುವತಿಯರನ್ನು ಒಳಗೊಂಡು 'ಯುವರಾಷ್ಟ್ರ'ವಾಗಿ ಹೊರಹೊಮ್ಮಿದೆ. 15ರಿಂದ 29 ವರ್ಷದ ಭಾರತೀಯ ಯುವಕ ಮತ್ತು ಯವತಿಯರು 27.2% ರಷ್ಟಿರುವುದು ವಿಶೇಷವಾಗಿದೆ.

ಕೋಷ್ಟಕ–01ನ್ನು ವಿಶ್ಲೇಷಣೆ ಮಾಡುವುದಾದರೆ 1951–2011ರವರೆಗೆ (60ವರ್ಷಗಳಲ್ಲಿ) ಭಾರತದ ಜನಸಂಖ್ಯೆ 84.9ಕೋಟಿ 1921 ರ ನಂತರ ಜನಸಂಖ್ಯಾ ಹೆಚ್ಚಳ. 1921–1951 ಭಾರತದ ಜನಸಂಖ್ಯೆ 110 ಮಿಲಿಯನ್. ಮುಂದಿನ ನಾಲ್ಕು ದಶಕಗಳಲ್ಲಿ ಅಂದರೆ 1951–1991ರಲ್ಲಿ 485 ಮಿಲಿಯನ್ ಹೆಚ್ಚಳ.

| ವರ್ಷ | ಭಾರತದ ಜನಸಂಖ್ಯೆ ಮಿಲಿಯನ್‌ಗಳಲ್ಲಿ | ಹೆಚ್ಚಾಗುವಿಕೆ ಅಥವಾ ಕಡಿಮೆಯಾಗುವಿಕೆ– ಹಿಂದಿನ ದಶಕದಲ್ಲಿ (ಮಿಲಿಯನ್‌ಗಳಲ್ಲಿ) | ಶೇಕಡಾ ಹೆಚ್ಚಾಗುವಿಕೆ ಅಥವಾ ಕಡಿಮೆಯಾಗುವಿಕೆ ಪ್ರಸಕ್ತ ದಶಕದಲ್ಲಿ |
|---|---|---|---|
| 1901 | 236.1 | – | – |
| 1911 | 252.1 | 16.0 | 5.7 |
| 1921 | 251.3 | 0.3 | (–) 0.3 |
| 1931 | 279.1 | 27.8 | 11.1 |
| 1941 | 318.7 | 39.6 | 14.2 |
| 1951 | 361.1 | 42.4 | 13.3 |
| 1961 | 439.2 | 78.1 | 21.5 |
| 1971 | 548.2 | 109.0 | 24.8 |
| 1981 | 683.3 | 135.1 | 24.7 |
| 1991 | 846.3 | 163.0 | 23.8 |

## ಜನಸಂಖ್ಯಾ ಸ್ಫೋಟಕ್ಕೆ ಕಾರಣಗಳು

- **ಜೀವಿತಾವಧಿಯ ಹೆಚ್ಚಳ:** 'ಜನನ ದರ ಹೆಚ್ಚಳ, ಮರಣ ದರ ಇಳಿಕೆ' ಅಂದರೆ ಅತ್ಯುತ್ತಮ ವೈದ್ಯಕೀಯ ಸೌಲಭ್ಯದಿಂದಾಗಿ ವ್ಯಕ್ತಿಯ ಜೀವಿತಾವಧಿ ಹೆಚ್ಚಾಗುವುದು ಸಹ ಒಂದು ಕಾರಣವಾಗಿದೆ.
- **ಸಮರ್ಪಕ ಕುಟುಂಬ ಯೋಜನೆಗಳ ಕೊರತೆ:** ಸಮರ್ಪಕ ಕುಟುಂಬ ಯೋಜನೆಗಳು ಅನುಷ್ಠಾನಗೊಳ್ಳದಿದ್ದರೆ ಅದು ಸಹ ಜನಸಂಖ್ಯಾ ಸ್ಫೋಟಕ್ಕೆ ದಾರಿ ಮಾಡಿಕೊಡುತ್ತದೆ. ಮಹಿಳೆ 15–45 ವರ್ಷಗಳವರೆಗೆ ಅನೇಕ ಬಾರಿ ಗರ್ಭಿಣಿಯಾಗುವುದು ಜನಸಂಖ್ಯಾ ಬೆಳವಣಿಗೆಗೆ ಕಾರಣವಾಗಿದೆ.
- **ಬಾಲ್ಯ ವಿವಾಹ:** ಇದು ಭಾರತೀಯ ಸಮಾಜಕ್ಕಂಟಿದ ಒಂದು ಸಾಮಾಜಿಕ ಸಮಸ್ಯೆಯಾಗಿದೆ. ಎಳೆ ವಯಸ್ಸಿನ ಹುಡುಗ–ಹುಡುಗಿಯರು ದೈಹಿಕ, ಮಾನಸಿಕ, ಭಾವನಾತ್ಮಕ ಪರಿಪಕ್ವತೆ ಹೊಂದಿರುವುದಿಲ್ಲ. ಇಂತಹ ವಯಸ್ಸಿನಲ್ಲಿ ಅವರ ವಿವಾಹ ಬಂಧನ ಕೌಟುಂಬಿಕ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲರನ್ನಾಗಿಸುತ್ತದೆ.
- **ಶಿಕ್ಷಣದ ಕೊರತೆ:** ಭಾರತೀಯ ಸಮಾಜದ ಬಹಳಷ್ಟು ಕುಟುಂಬದಲ್ಲಿನ ಬಹುಪ್ರಮಾಣದ ಅನಕ್ಷರತೆಯ ಪರಿಣಾಮ ಬಾಲ್ಯವಿವಾಹ, ಹೆಚ್ಚು ಮಕ್ಕಳು ಹಾಗೂ ಸ್ತ್ರೀಗೆ ಕೀಳರಿಮೆಯ ಸ್ಥಾನಮಾನಗಳು ಸಹ ಜನಸಂಖ್ಯಾ ಬೆಳವಣಿಗೆಗೆ ಕಾರಣವಾಗಿದೆ.
- **ಧಾರ್ಮಿಕ ಕಾರಣ:** ಸಂಪ್ರದಾಯಸ್ಥರು ಕುಟುಂಬ ಯೋಜನೆಗಳಿಗೆ ವಿರುದ್ಧವಾದ ಮನೋಭಾವ ಹೊಂದಿರುವುದು, 'ಹೆಣ್ಣು ಇರುವುದೇ ಮಕ್ಕಳನ್ನು ಹೆರಲು' ಎಂಬ ಭಾವನೆ. ದೇವರು ಮಕ್ಕಳನ್ನು ಕೊಟ್ಟಾಗ ನಾವೇಕೆ ಬೇಡ ಎನ್ನಬೇಕು ಎಂಬ ಮೌಢ್ಯತೆ. ಹಿಂದೂ ಸಮುದಾಯಗಳಿಗಿಂತ ಸಾಮಾನ್ಯವಾಗಿ ಮುಸ್ಲಿಂ

**ಪುಟ 5 ಕ್ಕೆ ➤**

➢ ಪುಟ 4 ರಿಂದ.....

ಸಮುದಾಯಗಳಲ್ಲಿ ಜನನ ಪ್ರಮಾಣ ಹೆಚ್ಚು. ಇಂತಹ ಆಧುನಿಕ ಕಾಲದಲ್ಲೂ ಸಹ ಮುಸ್ಲಿಂ ಕುಟುಂಬಗಳ ಗಂಡು–ಹೆಣ್ಣು ಇಬ್ಬರು ಸಹ ಕುಟುಂಬ ಯೋಜನೆಗಳಿಗೆ ವಿರೋಧ ಭಾವ ಹೊಂದಿರುವುದು ಈ ರಾಷ್ಟ್ರದ ಬಹುದೊಡ್ಡ ದೌರ್ಭಾಗ್ಯ.

- **ಬಡತನ:** ಸಮಾಜದಲ್ಲಿ ಬಹಳಷ್ಟು ಜನಗಳಿಗೆ ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಸೌಲಭ್ಯಗಳನ್ನು ಪಡೆಯಲು ಹೆಚ್ಚು ಮಕ್ಕಳನ್ನು ಹೆರುವ ಪ್ರವೃತ್ತಿ, ಜೀವನೋಪಾಯಕ್ಕೆ ಬೇಕಾದ ದುಡಿಯುವ ಕೈಗಳನ್ನು ಸೃಜಿಸಲು ನಿರಂತರ ಸಂತಾನೋತ್ಪತ್ತಿ ಇವು ಜನಸಂಖ್ಯಾ ತ್ವರಿತ ಬೆಳವಣಿಗೆಗೆ ಕಾರಣವಾಗಿದೆ.
- **ಮನಸ್ಥಿತಿಯ ಸಮಸ್ಯೆ:** ದಂಪತಿಗಳಿಗೆ ಹೆಣ್ಣು ಮಗುವಿದ್ದರೂ ಸಹ ಗಂಡು ಮಗುವನ್ನು ಪಡೆಯುವ ಹಂಬಲ ಮನಸ್ಥಿತಿ ಜನಸಂಖ್ಯಾ ಬೆಳವಣಿಗೆಗೆ ಕಾರಣವಾಗಿದೆ. ಎಷ್ಟೇ ಬಡವರಾದರೂ ಗಂಡುಮಕ್ಕಳು ಮಾತ್ರ ಗಂಜಿ ಸಂಪಾದಿಸಲು ಯೋಗ್ಯರು ಎಂಬ ಮೌಢ್ಯತೆ.

## ಜನಸಂಖ್ಯಾ ಸ್ಫೋಟದಿಂದಾಗುವ ಸಮಸ್ಯೆಗಳು

- **ಬಡತನ ಹೆಚ್ಚಳ:** ಜನಸಂಖ್ಯಾ ಸ್ಫೋಟದಿಂದ ಅನಕ್ಷರತೆ, ನಿರುದ್ಯೋಗ ಮತ್ತು ಬಡತನ ಪ್ರಮಾಣ ಹೆಚ್ಚಾಗುತ್ತದೆ.
- **ಬಡವ– ಶ್ರೀಮಂತರ ನಡುವಿನ ಅಂತರ ಹೆಚ್ಚಾಗುವುದು:–** ಜನಸಂಖ್ಯಾ ಸ್ಫೋಟವು ಸಂಪತ್ತಿನ ಅಸಮಾನ ವಿತರಣೆಗೆ ದಾರಿ ಮಾಡಿಕೊಡುತ್ತದೆ. ಆದಾಯದ ಅಸಮಾನ ವಿತರಣೆಗೆ ಕಾರಣವಾಗಿ ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರ ಹೆಚ್ಚುತ್ತ ಹೋಗುತ್ತದೆ.
- **ಜನಸಂಖ್ಯಾ ವಲಸೆ:** ವಲಸೆ ಮಾನವನ ಸಹಜ ಪ್ರವೃತ್ತಿ. ಆದರೆ ಒಂದೇ ಪ್ರದೇಶದಲ್ಲಿ ಜನಸಾಂದ್ರತೆ ಹೆಚ್ಚುವುದರಿಂದ ಜನರು ತಮ್ಮ ಮೂಲ ವಾಸ ಸ್ಥಾನಗಳನ್ನು ತ್ಯಜಿಸಿ ಹೋಗುವುದು ಒಂದು ಸಮಸ್ಯೆಯಾಗಿದೆ.
- **ಸ್ವಾಭಾವಿಕ ಸಂಪನ್ಮೂಲಗಳ ಶೋಷಣೆ:** ಜನಸಂಖ್ಯಾಸ್ಫೋಟವು ನೈಸರ್ಗಿಕ ಸಂಪನ್ಮೂಲಗಳ ಶೋಷಣೆಗೆ ದಾರಿ ಮಾಡಿ ಕೊಡುತ್ತದೆ. ಇದರ ತತ್ಪರಿಣಾಮ ಬಡತನ ರೇಖೆಯಿಂದ ಕೆಳಗೆ ಇರುವವರು ಹಸಿವು, ನ್ಯೂನ ಪೋಷಣೆ ಮತ್ತು ಅನಾರೋಗ್ಯದ ಜೀವನದಿಂದ ನರಳುತ್ತಾರೆ. ಜನಸಂಖ್ಯಾ ಸ್ಫೋಟ ಪರಿಸರ ಮಾಲಿನ್ಯ ಉಂಟುಮಾಡಿ, ಅರಣ್ಯ ನಾಶಕ್ಕೆ ದಾರಿಮಾಡಿಕೊಡುತ್ತದೆ.

## ಜನಸಂಖ್ಯಾ ಸ್ಫೋಟಕ್ಕಿರುವ ಪರಿಹಾರಗಳು

ಭಾರತದಲ್ಲಿನ ಬಡತನ, ಅನಕ್ಷರತೆ, ನಿರುದ್ಯೋಗ, ಆರ್ಥಿಕ ಹಿನ್ನಡೆ, ಆರೋಗ್ಯ, ಪರಿಸರ ನಾಶ ಮುಂತಾದ ಸಮಸ್ಯೆಗಳ ಪರಿಹಾರ ಜನಸಂಖ್ಯಾ ಸ್ಫೋಟದ ನಿಯಂತ್ರಣವೇ ಆಗಿದೆ. ತ್ವರಿತ ಜನಸಂಖ್ಯಾ ಬೆಳವಣಿಗೆ ರಾಷ್ಟ್ರವನ್ನು ಬಡತನದತ್ತ ದೂಡುತ್ತದೆ. ಆದ ಕಾರಣ ಈ ಕೆಳಕಂಡ ಕ್ರಮಗಳ ಬಗ್ಗೆ ಮುಂಜಾಗ್ರತೆ ವಹಿಸುವುದರಿಂದ ಜನಸಂಖ್ಯಾ ಸ್ಫೋಟಕ್ಕೆ ಪರಿಹಾರ ಕಂಡುಕೊಳ್ಳಬಹುದು.

- **ಕುಟುಂಬ ಯೋಜನೆ:–** ಸಮರ್ಥ ಮತ್ತು ಸಂವೃದ್ಧಿಯ ರಾಷ್ಟ್ರ ನಿರ್ಮಾಣದಲ್ಲಿ ಪ್ರತಿಯೊಬ್ಬ ದೇಶವಾಸಿಯು ಸಹ ಕುಟುಂಬ ಯೋಜನೆಯನ್ನು ಪಾಲಿಸಬೇಕಾಗುತ್ತದೆ. ಕುಟುಂಬ ಯೋಜನೆಯ ಪರಿಪಾಲನೆ ನಾಗರೀಕ ಸಮಾಜದ ಜವಾಬ್ದಾರಿಯ ನಡೆಯಾಗಿದೆ.
- **ವಿವಾಹ ವಯಸ್ಸಿನ ಹೆಚ್ಚಳ:** ಗಂಡು– ಹೆಣ್ಣಿನ ವಿವಾಹ ವಯಸ್ಸನ್ನು ಹೆಚ್ಚಿಸಬೇಕು. ರಾಷ್ಟ್ರಾದ್ಯಂತ ಇಂತಹ ಬಿಗಿ ಕಾನೂನನ್ನು ಜಾರಿಗೊಳಿಸಬೇಕು. ಬಿಗಿ ಕಾನೂನುಗಳನ್ನು ಜಾರಿಗೊಳಿಸುವ ರಾಜಕೀಯ ಇಚ್ಛಾಶಕ್ತಿ ಪ್ರತಿಯೊಬ್ಬ ಜನನಾಯಕನಲ್ಲಿರಬೇಕು.
- **ಸಂತುಲಿತ ಅನುಪಾತ:–** ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ ಜನಸಂಖ್ಯೆಯು ಗುಣಾತ್ಮಕ ಪ್ರಗತಿ ಮುಖ್ಯವೆನಿಸುತ್ತದೆ. ಕುಟುಂಬದಲ್ಲಿರುವ ಮಕ್ಕಳ ನಡುವೆ ಕನಿಷ್ಠ ಐದು ವರ್ಷಗಳ ಅಂತಹ ಹಾಗೂ ಕುಟುಂಬಲ್ಲಿನ ಮಕ್ಕಳ ಸಂಖ್ಯೆ ಎರಡನ್ನು ಮೀರದಂತೆ ಜಾಗ್ರತೆ ವಹಿಸುವುದು ನಾಗರೀಕ ಸಮಾಜದ ಬಹು ದೊಡ್ಡ ಜವಾಬ್ದಾರಿ.
- **ಸಾರ್ವಜನಿಕ ಆರೋಗ್ಯ ಸೇವೆಗಳ ಸುಧಾರಣೆ:–** ಮನುಷ್ಯನ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಆಧ್ಯತೆ ನೀಡಬೇಕು.
- **ಭೂಮಿಯ ಸದ್ಬಳಕೆ:–** ತ್ವರಿತ ಜನಸಂಖ್ಯಾ ಬೆಳವಣಿಗೆಯ ಹೊರೆಯನ್ನು ಶಮನಗೊಳಿಸುವಲ್ಲಿ ಭೂಮಿಯ ಸದ್ಬಳಕೆ ವೈಜ್ಞಾನಿಕ ಮತ್ತು ಯೋಜಿತ ರೀತಿಯಲ್ಲಿರಬೇಕಾಗುತ್ತದೆ. ವ್ಯವಸಾಯ, ಪಶುಸಂಗೋಪನೆ, ಸಾಕಾಣಿಕೆ ಮುಂತಾದವುಗಳನ್ನು ವೈಜ್ಞಾನಿಕವಾಗಿ ಕೈಗೊಳ್ಳುವುದು.
- **ಶಿಕ್ಷಣದ ಅಗತ್ಯತೆ:–** ರಾಷ್ಟ್ರದ ಪ್ರತಿಯೊಬ್ಬನಿಗೂ ಶಿಕ್ಷಣ ಸಿಗುವಂತಾಗಬೇಕು. ಆಗ ಮಾತ್ರ ವ್ಯಕ್ತಿತ್ವದ ಉನ್ನತಿ ಸಾಧ್ಯ. ಮಾನವರ ಎಲ್ಲಾ ಸಮಸ್ಯೆಗಳಿಗೆ ಇರುವ ಪರಿಹಾರವೇ 'ಶಿಕ್ಷಣ'.
- **ಯೋಜಿತ ಕೈಗಾರಿಕರಣ:–** ಬಡವ– ಬಲ್ಲಿದನ ನಡುವಿನ ಅಂತರಕ್ಕೆ ಕಡಿವಾಣ ಹಾಕಲು ಆದಾಯದಲ್ಲಿ ಸಮಾನತೆ ತರುವುದು ಮುಖ್ಯವೆನಿಸುತ್ತದೆ. ಇದು ಯೋಜಿತ ಕೈಗಾರಿಕರಣದಿಂದ ಮಾತ್ರ ಸಾಧ್ಯ!
- **ಸಮರ್ಥ ಸರ್ಕಾರಿ ನಿಯಮಗಳು:–** ಸಾರ್ವಜನಿಕ ಸಮರ್ಥ ಕಾನೂನುಗಳನ್ನು ಜಾರಿಗೊಳಿಸಿ ಅನಗತ್ಯ ವಲಸೆಯನ್ನು ತಡೆಯುವುದು ಪ್ರಮುಖವೆನಿಸುತ್ತದೆ.
- **ಕುಟುಂಬ ಯೋಜನೆ:–** ಕುಟುಂಬ ಯೋಜನೆಯನ್ನು ರಾಷ್ಟ್ರಾದ್ಯಂತ ಜನಪ್ರಿಯಗೊಳಿಸಿ ಪ್ರತಿಯೊಬ್ಬರು ಪಾಲಿಸುವಂತೆ ಎಚ್ಚರಿಕೆ ವಹಿಸುವುದು.

ಜನಸಂಖ್ಯಾ ಸ್ಫೋಟದ ದುಷ್ಪರಿಣಾಮಗಳನ್ನು ತಡೆಯುವಲ್ಲಿ 'ಶಿಕ್ಷಣ' ಬಹುದೊಡ್ಡ ಪರಿಹಾರೋಪಾಯವಾಗಿದೆ. ಆದ ಕಾರಣ ರಾಷ್ಟ್ರದ ಪ್ರತಿಯೊಬ್ಬ ನಾಗರೀಕರನು ವಿದ್ಯಾವಂತನಾಗಬೇಕಾಗಿದೆ. ಜೊತೆಗೆ ಪ್ರತಿಯೊಂದು ಮಗುವು ಯಶಸ್ವಿಯಾಗಿ ಶಿಕ್ಷಣವನ್ನು ಪೂರೈಸಲು ಅನುವು ಮಾಡಿಕೊಡಬೇಕು. ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಆಶಯದಂತೆ ಪ್ರತಿಯೊಂದು ಮಗುವು ಕೌಶಲ್ಯಾಧಾರಿತ ಶಿಕ್ಷಣ ಪಡೆದು ರಾಷ್ಟ್ರದ ಆರ್ಥಿಕತೆಗೆ ಭದ್ರ ಬುನಾದಿ ಹಾಕಬೇಕು. "ಬೇಡುವ ಕೈಗಳನ್ನು– ನೀಡುವ ಕೈಗಳಾಗಿ ಪರಿವರ್ತಿಸಿ ಭಾರತವನ್ನು ಸದೃಢ ಆರ್ಥಿಕ ರಾಷ್ಟ್ರವನ್ನಾಗಿ ಮನ್ವಂತರ ಮಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಇಂತಹ ಸದೃಶ ಪರಿವರ್ತನೆಯಿಂದ ಮಾತ್ರ ನಾವುಗಳು ಜನಸಂಖ್ಯಾಸ್ಫೋಟಕ್ಕೆ ಪರಿಹಾರ ಆಗಲು ಸಾಧ್ಯ! ●

**ಬಹುರತ್ನಾ ವಸುಂಧರಾ**

# ರಾಣಿರಾಸಮಣಿ



**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

'ರಾಣಿರಾಸಮಣಿ' 'ರಾಣಿರಾಸ್ಮಣಿ' ಎಂಬ ಮಹಿಳೆಯ ಜನ್ಮದ್ವಿಶತಮಾನೋತ್ಸವವನ್ನು ಆಚರಿಸಿದ ಸಂದರ್ಭದಲ್ಲಿ ಭಾರತ ಸರ್ಕಾರವು ಅವಳ ನೆನಪಿಗಾಗಿ 1993ರ ಸೆಪ್ಟೆಂಬರ್ 24 ರಂದು ಒಂದು ಅಂಚೆ ಚೀಟಿಯನ್ನು ಬಿಡುಗಡೆ ಮಾಡಿತ್ತು. ಹತ್ತೊಂಭತ್ತನೇ ಶತಮಾನದಲ್ಲಿದ್ದ ಈಕೆ ಬಂಗಾಳದಲ್ಲಿ, ಬಡವರ ಮತ್ತು ಮಹಿಳೆಯರ ಸಲುವಾಗಿ ಅವಿಶ್ರಾಂತವಾಗಿ ದುಡಿದು ಅಲ್ಲಿನ ಸಮಾಜ ಸುಧಾರಣಾ ಚಳುವಳಿಗೆ ತನ್ನ ಅಮೂಲ್ಯ ಕೊಡುಗೆಯನ್ನು ನೀಡಿದವಳು. ಯಾರು ಈಕೆ? ಈಕೆಯ ಹಿನ್ನೆಲೆ ಏನು? ಯಾವ ರೀತಿಯಲ್ಲಿ ಈ ಬಗೆಯ ಹೋರಾಟವನ್ನು ನಡೆಸಿದಳು? ಅದೆಲ್ಲಕ್ಕೆ ಪ್ರೇರಣೆ ಬಂದಿದ್ದಾದರೂ ಯಾರಿಂದ? ಎಂಬೆಲ್ಲ ಪ್ರಶ್ನೆಗಳು ನಮ್ಮಲ್ಲಿ ಮೂಡುವುದು ಸಹಜ. ಅವೆಲ್ಲಕ್ಕೆ ಉತ್ತರಗಳನ್ನು ಕಂಡುಕೊಳ್ಳಬೇಕಾದುದೂ ನಮ್ಮ ಕರ್ತವ್ಯವೇ ಆಗಿದೆ.

ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯಲ್ಲಿ ರಾಣಿರಾಸ್ಮಣಿಯ ವೃತ್ತಾಂತ ಬರುತ್ತದೆ. ಒಂದು ಅತಿಸಾಮಾನ್ಯ ಬಡ ಕುಟುಂಬದಲ್ಲಿ ಹುಟ್ಟಿದ ಈಕೆ, ಶ್ರೀಮಂತ ಕುಟುಂಬವನ್ನು ಸೇರಿ, ತನ್ನ ಕುಶಾಗ್ರ ಬುದ್ಧಿಮತ್ತೆಯಿಂದಲೇ ಮನೆತನದ ಜವಾಬ್ದಾರಿಗಳನ್ನು ನಿರ್ವಹಿಸುವುದರೊಂದಿಗೇ ತನ್ನ ಸುತ್ತಲಿನ ಸಮಾಜದಲ್ಲಿ ಕಂಡುಬರುತ್ತಿದ್ದ ಲೋಪದೋಷಗಳನ್ನು ಗಮನಿಸಿ ನಿವಾರಿಸಲು ಮುಂದಾಗಿ ಯಶಸ್ವಿಯೂ ಆದವಳು.

1793 ಸೆಪ್ಟೆಂಬರ್ 24 ರಲ್ಲಿ ಕಲ್ಕತ್ತಾದ ಬಳಿಯ ಕೋನಾ ಎಂಬ ಗ್ರಾಮದಲ್ಲಿ ಬಡ ಕೃಷಿಕ ಕುಟುಂಬದಲ್ಲಿ ಜನಿಸಿದ ಈಕೆ ಬಾಲ್ಯದಿಂದಲೂ ತಾಯಿ ರಾಮಪ್ರಿಯಾ ದೇವಿ ಮನೆಗೆಲಸದಲ್ಲಿ ಮತ್ತು ತಂದೆಗೆ ಕೃಷಿಕಾರ್ಯದಲ್ಲಿ ನೆರವಾಗುತ್ತಿದ್ದಳು. ತಂದೆ ಹರೇಕೃಷ್ಣದಾಸ್ ಹೆಚ್ಚು ಶಿಕ್ಷಣವನ್ನು ಪಡೆಯದಿದ್ದರೂ ಬಂಗಾಳಿ ಭಾಷೆಯನ್ನು ಓದಲು ಮತ್ತು ಬರೆಯಲು ಕಲಿತಿದ್ದರು. ಸಂಜೆಯ ಹೊತ್ತು ಮನೆಯ ಮುಂದೆ ಕುಳಿತು ತಮಗೆ ತಿಳಿದ ಪುರಾಣದ ಕಥೆಗಳನ್ನು ಊರ ಜನರಿಗೆ ಹೇಳುತ್ತಿದ್ದರು. ಅದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದವರಲ್ಲಿ ಬಾಲಕಿ ರಾಸಮಣಿಯೂ ಒಬ್ಬಳಾಗಿದ್ದಳು. ಹನ್ನೊಂದನೇ ವಯಸ್ಸಿನಲ್ಲಿ ಕೋಲ್ಕತ್ತಾದ ಶ್ರೀಮಂತ ಜಮೀನ್ದಾರೀ ಕುಟುಂಬದ ಸದಸ್ಯರಾದ ಬಾಬು ರಾಜಚಂದ್ರದಾಸ್ ಎಂಬವರೊಂದಿಗೆ ರಾಸ್ಮಣಿಯ ವಿವಾಹವಾಗಿತ್ತು. ಆಕೆ ಅವರಿಗೆ ಮೂರನೇ ಪತ್ನಿಯಾಗಿದ್ದಳು. ಮೊದಲಿನವರಿಬ್ಬರೂ ಕಾರಣಾಂತರಗಳಿಂದ ತೀರಿಕೊಂಡಿದ್ದರು. ಶಾಲಾಶಿಕ್ಷಣವನ್ನು ಪಡೆಯದಿದ್ದರೂ ರಾಸ್ಮಣಿ ಕುಶಾಗ್ರಮತಿಯಾಗಿದ್ದು, ಅತ್ಯಂತ ಸುಸಂಸ್ಕೃತ ವ್ಯಕ್ತಿಯಾಗಿದ್ದಳು. ಬಡತನದಲ್ಲಿಯೇ ಬೆಳೆದಿದ್ದರೂ ಶ್ರೀಮಂತ ಮನೆಗೆ ಸೇರಿದ ನಂತರ ಅಲ್ಲಿನ ವಹಿವಾಟುಗಳನ್ನೆಲ್ಲ ತುಂಬ ಜಾಣತನದಿಂದ ನಿರ್ವಹಿಸತೊಡಗಿದ್ದಳು.

1836 ರಲ್ಲಿ ಪತಿಯ ಮರಣಾ ನಂತರ ಜಮೀನ್ದಾರಿ ಮತ್ತು ಹಣಕಾಸಿನ ಜವಾಬ್ದಾರಿಯನ್ನುವಹಿಸಿಕೊಂಡು ಸಮರ್ಥವಾಗಿ ನಿಭಾಯಿಸತೊಡಗಿದಳು. ಜೊತೆಗೆ ಅಪಾರವಾದ ದಾನಧರ್ಮದ ಕಾರ್ಯಗಳನ್ನು ಸಹ ನಡೆಸತೊಡಗಿದಳು. ದಕ್ಷಿಣೇಶ್ವರದಲ್ಲಿ ಕಾಳಿಯ ಮಂದಿರವನ್ನು ಕಟ್ಟಿಸಲು ಈಕೆ ಕಂಡ ಕನಸು ಪ್ರೇರಣೆಯಾಗಿತ್ತು. ರಾಮಕೃಷ್ಣಪರಮಹಂಸರೇ ಅದರ ಅರ್ಚಕರಾಗಿದ್ದರು. ಕಾಳೀಮಾತೆಯ ಕಟ್ಟಾ ಭಕ್ತೆಯಾಗಿದ್ದ ರಾಣಿಯ ಮನೆಯು ಪ್ರತಿ ಶರತ್ಕಾಲದಲ್ಲಿ ಸಾಂಪ್ರದಾಯಿಕ ದುರ್ಗಾಪೂಜೆ ಆಚರಣೆಯ ಸ್ಥಳವಾಗಿತ್ತು. ಈಕೆ ಸಮಾಜಕ್ಕೆ ಹಲವಾರು ದತ್ತಿಗಳನ್ನು ನೀಡಿದ್ದಲ್ಲದೆ ಯಾತ್ರಾರ್ಥಿಗಳಿಗಾಗಿ ಸುವರ್ಣರೇಖಾ ನದಿಯಿಂದ ಪುರಿಗೆ ರಸ್ತೆಯ ನಿರ್ಮಾಣವಾಗುವಂತೆ ವ್ಯವಸ್ಥೆ ಮಾಡಿದಳು. ಗಂಗಾನದಿಯಲ್ಲಿ ಯಾತ್ರಾರ್ಥಿಗಳ ಸ್ನಾನಕ್ಕೆಂದು ಅನೇಕ ಘಾಟ್‌ಗಳನ್ನು ನಿರ್ಮಿಸಲು ಧನಸಹಾಯ ಮಾಡಿದಳು. ಅಂದಿನ ಇಂಪೀರಿಯಲ್ ಲೈಬ್ರರಿ (ಈಗ ಭಾರತದ ರಾಷ್ಟ್ರೀಯ ಗ್ರಂಥಾಲಯ) ಮತ್ತು ಹಿಂದೂ ಕಾಲೇಜಿಗೆ (ಈಗ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ) ದೇಣಿಗೆ ನೀಡಿದಳು.

ಅದು ಬ್ರಿಟಿಷರು ಬಂಗಾಳದ ಪ್ರದೇಶಗಳಲ್ಲಿ ಹಲವು ರೀತಿಗಳಲ್ಲಿ ತಮ್ಮ ದಬ್ಬಾಳಿಕೆಯನ್ನು ನಡೆಸುತ್ತಿದ್ದ ಕಾಲ. ದೇಶಪ್ರೇಮ, ಸ್ವಾಭಿಮಾನ, ಜನ ಪರ ಕಾಳಜಿ, ಕಾರ್ಯಕುಶಲತೆ ಎಲ್ಲವನ್ನೂ ಹೊಂದಿದ್ದ ರಾಸ್ಮಣಿ ಬ್ರಿಟಿಷರನ್ನು ಎದುರಿಸುವ ಎದೆಗಾರಿಕೆಯನ್ನು ತೋರಿದ್ದಳು.

ಗಂಗಾನದಿಯ ಒಂದು ಭಾಗದಲ್ಲಿ ಹಡಗು ವ್ಯಾಪಾರವನ್ನು ತಡೆಯುವ ಮೂಲಕ ಬ್ರಿಟಿಷರು ಮೀನುಗಾರರ ಮೇಲೆ ಅತಿಹೆಚ್ಚು ತೆರಿಗೆಯನ್ನು ವಿಧಿಸಿದ್ದರು. ಆ ಸಮಯದಲ್ಲಿ ಮೀನುಗಾರರ ಬಗ್ಗೆ ಕಾಳಜಿ ಹೊಂದಿದ ರಾಸ್ಮಣಿ ಒಂದಷ್ಟು ಪ್ರದೇಶವನ್ನು ತಾನು ಖರೀದಿಸಿ ಅದರ ಸುತ್ತಲೂ ಬೇಲಿ ಹಾಕಿಸಿ ಯಾವುದೇ ದೋಣಿಗಳು ಆ ಪ್ರದೇಶದ ಸಮೀಪಕ್ಕೆ ಸುಳಿಯದಂತೆ ಬ್ರಿಟಿಷರಿಗೇ ನಿರ್ಬಂಧ ವಿಧಿಸಿದಳು. ಅದು ತನ್ನ ಖಾಸಗೀ ಪ್ರದೇಶವಾಗಿದ್ದು ಬೇರೆಯವರ ಪ್ರವೇಶಕ್ಕೆ ತಡೆಯೊಡ್ಡುವ ಅಧಿಕಾರ ತನ್ನದೆಂದು ಸಮರ್ಥಿಸಿಕೊಂಡಿದ್ದಳು. ಕಡೆಗೆ ಮೀನುಗಾರರ ಮೇಲೆ ವಿಧಿಸಿದ್ದ ತೆರಿಗೆಯನ್ನು ಬ್ರಿಟಿಷರು ರದ್ದುಪಡಿಸಿದ ಮೇಲೆ ತನ್ನ ನಿರ್ಬಂಧವನ್ನೂ ತೆಗೆದುಹಾಕಿದ್ದಳು.

ಹಿಂದೂ ಪೂಜಾ ಮೆರವಣಿಗೆಯಲ್ಲಿನ ವಾದ್ಯಗಳ ಶಬ್ದವು ಶಾಂತಿಯನ್ನು ಕದಡುತ್ತದೆಂದು ಬ್ರಿಟಿಷ್ ಅಧಿಕಾರಿಯೊಬ್ಬ ಆ ಮೆರವಣಿಗೆಯನ್ನು ನಿಲ್ಲಿಸಿದಾಗ ಅವಳು ಆ ಆದೇಶವನ್ನು ಧಿಕ್ಕರಿಸಿ ಮತ್ತಷ್ಟು ಹೆಚ್ಚಿನ ಶಬ್ದದಿಂದ ಕೂಡಿದ ವಾದ್ಯಗಳೊಂದಿಗೆ ಮೆರವಣಿಗೆ ನಡೆಯುವಂತೆ ವ್ಯವಸ್ಥೆ ಮಾಡಿದಳು. ಕಡೆಗೆ ಬ್ರಿಟಿಷರು ಆಕೆಗೆ ವಿಧಿಸಿದ್ದ ದಂಡದ ಆದೇಶವನ್ನು ಹಿಂತೆಗೆದುಕೊಳ್ಳುವಂತಾಗಿತ್ತು. ಹೀಗೆ ಅನೇಕ ವಿಧಗಳಲ್ಲಿ ರಾಸ್ಮಣಿ ಬ್ರಿಟಿಷರೊಂದಿಗೆ ಘರ್ಷಣೆಗೆ ಮುಂದಾಗಿ ತನ್ನ ಕಾರ್ಯಗಳಲ್ಲಿ ಜಯಶಾಲಿಯೂ ಆಗಿದ್ದಳು.

ಮಹಿಳೆಯರ ಸಾಮಾಜಿಕ ಸ್ಥಿತಿಯನ್ನು ಸುಧಾರಿಸುವ ಕುರಿತು

ಪುಟ 10 ಕ್ಕೆ ➤

# ಗುರುವಂದನಾ ಕಾರ್ಯಕ್ರಮ

## ಬೆಂಗಳೂರು ದಕ್ಷಿಣ ಜಿಲ್ಲೆ

ದಿನಾಂಕ 04-07-2023 ಮಂಗಳವಾರದಂದು ಕ.ರಾ.ಮಾ.ಶಿ. ಸಂಘದ ಕಾರ್ಯಾಲಯ ಯಾದವಸ್ಮೃತಿಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ದಕ್ಷಿಣ ವಿಭಾಗದ ವತಿಯಿಂದ ಗುರುವಂದನಾ ಕಾರ್ಯಕ್ರಮವು ಶ್ರದ್ಧಾ, ಭಕ್ತಿ, ಸಂಭ್ರಮದಿಂದ ಆಚರಿಸಲ್ಪಟ್ಟಿತು. ಕು॥ ವೇದಶ್ರೀ ರವರ ಆಚಾರ್ಯ ಶಂಕರ ವಿರಚಿತ ಗುರ್ವಷ್ಟಕದ ಸುಶ್ರಾವ್ಯವಾದ ಗಾಯನದೊಂದಿಗೆ ಕಾರ್ಯಕ್ರಮ ಶುಭಾರಂಭಗೊಂಡಿತು. ಮುಖ್ಯ ವಕ್ತಾರರಾಗಿ ವಿದ್ವಾನ್ ವೇಂಕಟರಾಮ ಶಾಸ್ತ್ರಿಗಳು ಉಪಸ್ಥಿತರಿದ್ದರು. ಅವರು ಉಪನ್ಯಾಸ ನೀಡುತ್ತ ಭಾರತೀಯ ಪರಂಪರೆಯಲ್ಲಿ ಆಷಾಢ ಶುಕ್ಲ ಪೂರ್ಣಿಮೆಯು ಗುರುಪೂರ್ಣಿಮೆ ಅಥವಾ ವ್ಯಾಸಪೂರ್ಣಿಮೆ ಎಂದು ಪ್ರಸಿದ್ಧವಾಗಿದೆ. ಈ ದಿನ ಭಗವಾನ್ ವೇದವ್ಯಾಸರು ಅವತರಿಸಿದ ಪವಿತ್ರದಿನ. ಹಾಗಾಗಿ ಯತಿಗಳು ಸಾವಿರಾರು ವರ್ಷಗಳಿಂದ ಈ ದಿನದಂದು ಚಾತುರ್ಮಾಸ್ಯ ವ್ರತ ಸಂಕಲ್ಪ ಮಾಡಿ ವ್ಯಾಸರ ಪೂಜೆ ಮಾಡಿ ಒಂದೆಡೆ ನೆಲೆನಿಂತು ಲೋಕಕಲ್ಯಾಣಕ್ಕಾಗಿ ತಪಸ್ಸನ್ನು ಅನುಷ್ಠಾನ ಮಾಡುತ್ತಾರೆ. ವ್ಯಾಸರು ಪ್ರಪಂಚವನ್ನು ಜ್ಞಾನದ ಬೆಳಕಿನಿಂದ ಬೆಳಗಿದ ಮಹಾಪುರುಷರು. ಲೋಕಕ್ಕೆ ಭಗವಾನ್ ವ್ಯಾಸರ ಕೊಡುಗೆ ಅಪಾರ. ವಿಷ್ಣುವಿನ ಅವತಾರಿಗಳಾದ ವ್ಯಾಸರು ಅಧ್ಯಯನ ಸೌಕರ್ಯಕ್ಕಾಗಿ ವೇದಗಳ ವಿಭಾಗ ಮಾಡಿದರು. ಬ್ರಹ್ಮಸೂತ್ರಗಳನ್ನು ರಚಿಸಿದರು. 18 ಪುರಾಣಗಳನ್ನು, ಉಪಪುರಾಣಗಳನ್ನು ಮತ್ತು ಮಹಾಭಾರತವನ್ನು ರಚಿಸಿದರು. ಜ್ಞಾನ ನೀಡಿದ ಗುರುಗಳನ್ನು ಗೌರವಿಸುವುದು ಎಲ್ಲರ ಆದ್ಯ ಕರ್ತವ್ಯ. ಗುರುಗಳ ಮಹಿಮೆ ಅಪಾರವಾದದ್ದು. ಶ್ರೀರಾಮನಿಗೆ ವಸಿಷ್ಠರು ಗುರುಗಳು. ಶ್ರೀ ಕೃಷ್ಣನಿಗೆ ಸಾಂದೀಪಿನಿ ಮಹರ್ಷಿಗಳು ಗುರುಗಳು. ಅರ್ಜುನನಿಗೆ ದ್ರೋಣಾಚಾರ್ಯರು ಗುರುಗಳು. ಚಂದ್ರಗುಪ್ತನಿಗೆ ಚಾಣಕ್ಯ ಗುರುಗಳು. ಶಿವಾಜಿಗೆ ಸಮರ್ಥ ರಾಮದಾಸರು ಗುರುಗಳು. ಹಕ್ಕ, ಬುಕ್ಕರಿಗೆ ವಿದ್ಯಾರಣ್ಯರು ಗುರುಗಳು. ಸ್ವಾಮಿ ವಿವೇಕಾನಂದರಿಗೆ ಶ್ರೀ ರಾಮಕೃಷ್ಣ ಪರಮಹಂಸರು ಗುರುಗಳು. ಅಬ್ದುಲ್ ಕಲಾಂರವರಿಗೆ ವಿಕ್ರಂ ಸಾರಾಬಾಯಿ ಗುರುಗಳು. ಹೀಗೆ ಗುರು ಪರಂಪರೆ ಅದ್ಭುತವಾಗಿ ಇದೆ ಎಂದು ತಿಳಿಸಿದರು.

ತಾಯಿ-ತಂದೆ ಮೊದಲ ಗುರುಗಳು. ವಿದ್ಯೆಯನ್ನು ಹೇಳಿ ಕೊಟ್ಟ ಗುರುಗಳನ್ನಂತೂ ಮರೆಯಲು ಸಾಧ್ಯವಿಲ್ಲ. "ಏಕಾಕ್ಷರಂ ಕಲಿಸಿದಾತಂ ಗುರು" ಎಂಬಂತೆ ನಮ್ಮ ಜೀವನದಲ್ಲಿ ತಿದ್ದಿ, ತೀಡಿ ಬುದ್ಧಿ ಹೇಳಿ ಉತ್ತಮ ಸಂಸ್ಕಾರ ನೀಡಿ, ಮಾರ್ಗದರ್ಶನ ಮಾಡಿದವರೆಲ್ಲರೂ ಗುರುಗಳೇ ಎಂದು ಹೇಳಿ ಗುರುವಿನ ಗರಿಮೆ, ಗುರುವಿನ ಮಹತ್ವ, ಗುರುವಿನ ಕರುಣೆ, ಗುರುವಿನ ತ್ಯಾಗಗಳ ಗುಣಗಾನ ಮಾಡಿದರು. ಗುರುಗಳು ಮೇಣದ ಬತ್ತಿಯಂತೆ. ತಾವು ಉರಿದು ಪ್ರಪಂಚಕ್ಕೆ ಜ್ಞಾನದ ಬೆಳಕನ್ನು ದಯಪಾಲಿಸಿದ್ದಾರೆ. ಲೋಕ ಕಲ್ಯಾಣಕ್ಕಾಗಿ ದಧೀಚಿ ಮಹರ್ಷಿಯ ತ್ಯಾಗ, ಸ್ವಾಮಿ ವಿವೇಕಾನಂದರ ಮೇಲೆ ರಾಮಕೃಷ್ಣ ಪರಮಹಂಸರ ಕರುಣೆ, ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಶಿವಾಜಿ ಮಹಾರಾಜನಿಗೆ ಸಮರ್ಥ ರಾಮದಾಸರ ಮಾರ್ಗದರ್ಶನಗಳನ್ನು ದೃಷ್ಟಾಂತ ಪೂರ್ವವಾಗಿ ಸ್ಮರಿಸಿದರು.

ಜಗದ್ಗುರು ಶ್ರೀ ಶಂಕರಾಚಾರ್ಯರು ಆ ಕಾಲದಲ್ಲಿ ಅಖಂಡ ಭಾರತವನ್ನು ಸಂಚರಿಸಿ ಸನಾತನ ಹಿಂದೂ ಧರ್ಮವನ್ನು ಭದ್ರಗೊಳಿಸಿದ ಸಾಹಸ ಕಾರ್ಯವನ್ನು ಮರೆಯಲು ಸಾಧ್ಯವಿಲ್ಲ ಎಂದು ಬಣ್ಣಿಸಿದರು. ಕಾರ್ಯಕ್ರಮದ ನಿರೂಪಣೆ ಮತ್ತು ಪ್ರಾಸ್ತಾವಿಕವನ್ನು ಜಿಲ್ಲಾ ಕಾರ್ಯದರ್ಶಿಗಳಾದ ಡಾ॥ ವೇಂಕಟರಮಣ ದೇವರು ಭಟ್ಟ ರವರು ಮಾಡಿದರು. ಬೆಂಗಳೂರು ದಕ್ಷಿಣ ವಿಭಾಗ ಪ್ರಮುಖರಾದ ಶ್ರೀ ಸುರೇಂದ್ರ ಬಿ.ಎ ರವರು ಸ್ವಾಗತಿಸಿದರು. ಜಿಲ್ಲಾಧ್ಯಕ್ಷರಾದ ವಿದ್ವಾನ್ ನಾರಾಯಣ ಭಟ್ಟರವರು ವಂದನಾರ್ಪಣೆ ಮಾಡಿದರು. ಶ್ರೀ ಹರಿನಾರಾಯಣ ಮಯ್ಯರವರು ಶಾಂತಿ ಮಂತ್ರ ಪಠಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್ ರವರು, ರಾಜ್ಯ ಕೋಶಾಧ್ಯಕ್ಷರಾದ ಶ್ರೀ ಜೆ.ಎಂ. ಜೋಶಿರವರು, ಜಿಲ್ಲಾ ಖಜಾಂಚಿಗಳಾದ ಶ್ರೀ ಚನ್ನಕೃಷ್ಣಪ್ಪರವರು, ಪೂರ್ವ ತಾಲ್ಲೂಕಿನ ಅಧ್ಯಕ್ಷರಾದ ಶ್ರೀ ಮುನಿರಾಜು ಹಾಗೂ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ವರದಿ - **ಡಾ॥ ವೆಂಕಟರಮಣ ದೇವರ ಭಟ್ಟ,**
ಕಾರ್ಯದರ್ಶಿಗಳು, ಕ.ರಾ.ಮಾ.ಶಿ ಸಂಘ, ಬೆಂಗಳೂರು ದಕ್ಷಿಣ ಜಿಲ್ಲೆ

---

## ಕಲಬುರ್ಗಿ

ದೇಶವು ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಸನಾತನ ದೇಶ. ಇಲ್ಲಿ ಗುರು ಶಿಷ್ಯರ ಸಂಬಂಧದಲ್ಲಿ ಒಂದು ವಿಶಿಷ್ಟತೆ ಹೊಂದಿದ್ದು, ಗುರುವಿಗೆ ಉನ್ನತ ಸ್ಥಾನ ನೀಡಿದ ಏಕೈಕ ದೇಶವಾಗಿದೆ. ಆದ್ದರಿಂದ ಭಾರತ ದೇಶವನ್ನು ಇತರ ದೇಶಗಳೊಂದಿಗೆ ಹೋಲಿಕೆ ಮಾಡಲು ಸಾಧ್ಯವಿಲ್ಲ ಎಂದು ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಜಿ.ಲಕ್ಷ್ಮಣಜಿ ಹೇಳಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಘಟಕ ನಗರದ ಶ್ರೀ ಶರಣ ಬಸವೇಶ್ವರ ವಸತಿ ಪಿಯು ಕಾಲೇಜಿನಲ್ಲಿ ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ನಮ್ಮ ದೇಶ ಸ್ವತಂತ್ರ್ಯ ಪಡೆದು ನೂರು ವರ್ಷಗಳ ಸಂದರ್ಭದಲ್ಲಿ ನಮ್ಮ ದೇಶ ಹೇಗಿರಬೇಕು ಎಂಬ ಕನಸನ್ನು ನಾವು ಹೊಂದಿರಬೇಕು. ಆ ಕನಸನ್ನು ನನಸು ಮಾಡಲು ನಮ್ಮ ಕೊಡುಗೆ ಯಾವ ರೀತಿಯಾಗಿರಬೇಕು ಎಂಬ ಗುರಿಯನ್ನು ನಾವೆಲ್ಲರೂ ಹೊಂದಿರಲೇಬೇಕಿದೆ ಎಂದು ನುಡಿದರು. ವಿದ್ಯಾರ್ಥಿಗಳೊಂದಿಗೆ ಗುರು ಶಿಷ್ಯರ ಸಂಬಂಧದ ಕುರಿತು ಸಂವಾದ ಮಾಡಿದರು

ಎಸ್‌ಬಿಆರ್ ವಸತಿ ಪಿಯು ಕಾಲೇಜಿನ ಡಾ॥ ಶ್ರೀಶೈಲ್ ಹೊಗಾಡೆ, ವಿಶ್ವನಾಥ ಪಾಟೀಲ ಯಲಗೋಡ, ಡಾ॥ ಚಂದ್ರಕಾಂತ ಪಾಟೀಲ, ಮಾಧ್ಯಮಿಕ ಶಿಕ್ಷಕ ಸಂಘದ ವಿಭಾಗ ಪ್ರಮುಖ ಮಹೇಶ ಬಸರಕೋಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಜೀವಕುಮಾರ ಪಾಟೀಲ, ಅನಿಲ ಕುಮಾರ ಬಿರಾದಾರ, ದೇವಪ್ಪ ಕನ್ನೊಳ್ಳಿ, ಚಂದ್ರಶೇಖರ ಪಾಟೀಲ ಇತರರು ಕಾರ್ಯಕ್ರಮದಲ್ಲಿದ್ದರು.

●

**ನಿನ್ನ ತಲೆಯನ್ನೇ ಗುರುವಿಗೆ ನೀಡಿದರೂ ಅದು ಅಲ್ಪವೇ. - ಕಬೀರದಾಸ**

# ಪ್ರತಿಭಾ ಪುರಸ್ಕಾರದ ವಿಶೇಷತೆ ಮತ್ತು ಏಕೆ, ಯಾರಿಗೆ?



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

'ಪ್ರತಿಭಾ ಪುರಸ್ಕಾರ' ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವಿನೂತನ ಕಲ್ಪನೆ. 'ಪ್ರತಿಭಾ ನಮನ', ಪ್ರತಿಭಾ ಸಮ್ಮಾನ' ಎಂದು ಅನೇಕರು ಮಾಡುತ್ತಾರಲ್ಲಾ, ನಿಮ್ಮದೇನು ವಿಶೇಷ ಎಂಬ ಪ್ರಶ್ನೆ ಸಹಜ. ಹೌದು ಎಲ್ಲರೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸುತ್ತಾರೆ. ಅವರ ಪ್ರಯತ್ನ, ಪರಿಶ್ರಮವನ್ನು ಹಾಡಿ ಹೊಗಳುತ್ತಾರೆ. ಆದರೆ ಯಾರೂ ಅವರ ಮುಂದಿನ ಜೀವನಕ್ಕೆ ದಿಕ್ಸೂಚಿಯನ್ನು ತೋರುವುದಿಲ್ಲ. ಅವರಿಗೆ ಕೆರಿಯರಿಸಂನಿಂದ ಮೇಲೆದ್ದು ಬರುವ ಕರೆ ನೀಡುವುದಿಲ್ಲ. ಹಾಗಾದರೆ 'ಪ್ರತಿಭಾ ಪುರಸ್ಕಾರ'ವನ್ನು ಶಿಕ್ಷಕ ಸಂಘ ಯಾವ ರೀತಿ ಆಚರಿಸುತ್ತದೆ? ಆಚರಣೆಯಲ್ಲಿನ ವಿಶೇಷತೆ ಏನು?

## ಯಾರಿಗೆ ಪುರಸ್ಕಾರ?

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರತಿ ಶಾಲೆಯಲ್ಲಿ ಅತ್ಯಂತ ಹೆಚ್ಚು ಅಂಕ ಗಳಿಸಿದ ಓರ್ವ ವಿದ್ಯಾರ್ಥಿಗೆ. ಅವರನ್ನು ನಾವು 'ಶಾಲಾ ಪ್ರಥಮಿಗ' ಎಂದು ಗುರುತಿಸುತ್ತೇವೆ. ರ್‍ಯಾಂಕುಗಳನ್ನು ನೀಡುತ್ತಿದ್ದ ಕಾಲದಲ್ಲಿ ಎಲ್ಲ ಸಂಘ ಸಂಸ್ಥೆಗಳೂ– ಸರ್ಕಾರವೂ ಸೇರಿ– ರ್‍ಯಾಂಕ್ ವಿಜೇತರನ್ನು ಮಾತ್ರ ಸನ್ಮಾನಿಸುತ್ತಿದ್ದವು. ಆದರೆ ಸರ್ಕಾರಿ ಕಾರ್ಪೊರೇಷನ್ ಮುಂತಾದ ಶಾಲೆಗಳಲ್ಲಿ, ಅತಿ ಕಠಿಣ ಪರಿಸ್ಥಿತಿಯ ನಡುವೆಯೂ ಶೇಕಡ 70%, 80% ಅಂಕ ಪಡೆದ ವಿದ್ಯಾರ್ಥಿಗಳ ಬೆನ್ನು ಚಪ್ಪರಿಸುವವರು ಯಾರೂ ಇರಲಿಲ್ಲ. ಅಂಥವರಿಗಾಗಿ ನಾವು ಕಾರ್ಯಕ್ರಮ ಯೋಜಿಸಿದೆವು.

ಪ್ರತಿ ಜಿಲ್ಲೆಯಲ್ಲೂ ಇರುವ ಸರ್ಕಾರಿ, ಅನುದಾನಿತ, ಅನುದಾನ ರಹಿತ ಮತ್ತು ಕಾರ್ಪೊರೇಷನ್ ಶಾಲೆಗಳ ಶಾಲಾ ಪ್ರಥಮಿಗರನ್ನು ಭಾಗವಹಿಸಲು ಕರೆ ನೀಡುತ್ತೇವೆ. ಕೆಲವು ಜಿಲ್ಲೆಗಳಲ್ಲಿ ಈ ಸಂಖ್ಯೆ 500 ನ್ನೂ ಮೀರುತ್ತದೆ.

## ಆಯ್ಕೆ ಹೇಗೆ?

ಸಾಮಾನ್ಯವಾಗಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸುವವರು, ತಮ್ಮ ಜಾತಿ, ಕುಲ, ಮತದವರನ್ನು, ತಮ್ಮ ಸಂಘ ಸಂಸ್ಥೆಗಳ ಸದಸ್ಯರ, ನೌಕರರ ಮಕ್ಕಳನ್ನು ಮಾತ್ರ ಸನ್ಮಾನಿಸುತ್ತಾರೆ. ಆದರೆ ಶಿಕ್ಷಕ ಸಂಘವು ಈ ಭಾವನೆಯಿಂದ ಮೇಲೆದ್ದು, ಕೇವಲ ಪ್ರತಿಭೆಯನ್ನು ಮಾತ್ರ ಮಾನದಂಡವಾಗಿ ಸ್ವೀಕರಿಸಿದೆ. ಇಲ್ಲಿ ಎಲ್ಲ ಮತದ ಜಾತಿಯ ವಿದ್ಯಾರ್ಥಿಗಳೂ ಇರುತ್ತಾರೆ. ಯಾವುದೇ ಬಗೆಯ ಭೇದ– ಭಾವ ಎಣಿಸುವುದಿಲ್ಲ.

## ನಮ್ಮ ವಿಶೇಷತೆ ಏನು?

ವಿದ್ಯಾರ್ಥಿಗಳ ಪ್ರತಿಭೆ, ಪರಿಶ್ರಮವನ್ನು ಗುರುತಿಸಿ ಅವರನ್ನು ಸನ್ಮಾನಿಸಿ, ಪ್ರೋತ್ಸಾಹದ ನೀರೆರೆಯುವುದಂತೂ ಇದ್ದೇ ಇದೆ. ಆದರೆ ಮೂಲತಃ ಇದು ಕಿಶೋರಾವಸ್ಥೆಗೆ ಆಗ ತಾನೇ ಕಾಲಿಡುತ್ತಿರುವ ವಿದ್ಯಾರ್ಥಿಗಳಿಗೆ ಜೀವನ ಶಿಕ್ಷಣ ನೀಡುವ ಕಾರ್ಯಕ್ರಮ. ಅದಕ್ಕಾಗಿಯೇ ಈ ಕೆಳಕಂಡ ಅಂಶಗಳ ಕಡೆ ವಿಶೇಷ ಗಮನ ಕೊಡಲಾಗುತ್ತದೆ.

## ಸಮಯ ಪಾಲನೆ:

ಸಮಯ ಪಾಲನೆ ಒಂದು ಮೌಲ್ಯ. ನಮ್ಮಲ್ಲಿ ಸರ್ಕಾರದ್ದೂ ಸೇರಿ ಎಲ್ಲ ಕಾರ್ಯಕ್ರಮಗಳ ಪ್ರಾರಂಭವನ್ನು ಇಂಡಿಯನ್ ಸ್ಟ್ಯಾಂಡರ್ಡ್ ಟೈಂ ಎಂದು ಅಪಹಾಸ್ಯ ಮಾಡುವುದುಂಟು. ಆದರೆ ನಮ್ಮ ಕಾರ್ಯಕ್ರಮ ಬೆಳಗಿನ 10 ಗಂಟೆ ಎಂದರೆ 10 ಗಂಟೆಗೇ, ಯಾರಿಗೂ ಕಾಯದೆ ಪ್ರಾರಂಭಿಸುವುದು ಅನೂಚಾನವಾಗಿ ನಡೆಸಿಕೊಂಡು ಬಂದ ಹೆಗ್ಗಳಿಕೆ. ಈ ಸಂಗತಿ ಬೆಳೆಯುವ ಮನಸ್ಸುಗಳಿಗೆ ಜೀವನ ಪಾಠ.

## ಜೀವನಕ್ಕೊಂದು ಆದರ್ಶ:

ಜೀವನವನ್ನು ಯಾರೆಂದು ರೂಪಿಸಿಕೊಳ್ಳಬೇಕು ಎಂಬುದನ್ನು ತಿಳಿಸುವುದು ಶಿಕ್ಷಣದ ಒಂದು ಭಾಗ. ಅದಕ್ಕಾಗಿಯೇ ವಿದ್ಯಾರ್ಥಿಗಳನ್ನು ಸನ್ಮಾನಿಸಲು ಅತಿಥಿಗಳನ್ನು ಕರೆಯುವಾಗ, ಪರಿಶ್ರಮದಿಂದ ಜೀವನದಲ್ಲಿ ಮೇಲೇರಿದ, ದೇಶಕ್ಕೆ, ಸಮಾಜಕ್ಕೆ ವಿಶೇಷ ಸೇವೆ ಸಲ್ಲಿಸಿದ. ಜ್ಞಾನ ವಿಜ್ಞಾನ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿದ ಒಟ್ಟಾರೆ ತಮ್ಮ ಜೀವನದಲ್ಲಿ ಸಮಾಜದ ಹಿತವನ್ನು, ಸ್ವಂತ ಹಿತಕ್ಕಿಂತ ಹೆಚ್ಚೆಂದು ಪರಿಗಣಿಸಲಾದ ಮಹನೀಯರನ್ನು ಆಹ್ವಾನಿಸಲಾಗುತ್ತದೆ ಉದಾಹರಣೆಗಾಗಿ ಆರ್.ವಿ. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾಗಿದ್ದ ದಿವಂಗತ ಡಿ.ಎ. ಪಾಂಡು, ಶಿಕ್ಷಣ ತಜ್ಞ ಡಾ॥ ಎಚ್. ನರಸಿಂಹಯ್ಯ, ಡಾ॥ ಕಸ್ತೂರಿ ರಂಗನ್, ಡಾ॥ ಮಾಧವನ್ ನಾಯರ್, ಶ್ರೀ ಅಜೀಂ ಪ್ರೇಂಜಿ, ಶ್ರೀ ಎನ್.ಆರ್. ನಾರಾಯಣ ಮೂರ್ತಿ, ಶ್ರೀಮತಿ ಸುಧಾಮೂರ್ತಿ, ಶ್ರೀಮತಿ ಕಿರಣ್ ಮುಜೂಂದಾರ್ ಷಾ, ಮಾಜಿ ಲೋಕಾಯುಕ್ತ ಜಸ್ಟಿಸ್ ವೆಂಕಟಾಚಲ, ಶ್ರೀ.ಶ್ರೀ ರವಿಶಂಕರ್ ಗುರೂಜಿ ಮೊದಲಾದ ಕೆಲವರ ಹೆಸರನ್ನು ಉಲ್ಲೇಖಿಸಿದಲ್ಲಿ ನಮ್ಮ ಮಾತಿಗೆ ಬೆಲೆ ಬಂದೀತು. ಇಂಥ ಮಹನೀಯರ ಉತ್ತೇಜಕ ಮಾತುಗಳನ್ನು ಕೇಳಿ ಅವರಿಂದ ಸನ್ಮಾನಿತರಾದ ಆ ವಿದ್ಯಾರ್ಥಿಗಳು ಸಹಜವಾಗಿ ತಾವೂ ಸಾಧನಾ ಮಾರ್ಗದಲ್ಲಿ ನಡೆಯುವ ಮನಸ್ಸು ಮಾಡದೇ ಇರುತ್ತಾರೆಯೇ?

## ತಾರುಣ್ಯಕ್ಕೊಂದು ಸಂಕಲ್ಪ

ನಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸಹಸ್ರಾರು ಜನರು ತಮ್ಮ ಬಾಲ್ಯ, ತಾರುಣ್ಯಗಳಲ್ಲಿ ನಾಡಿಗಾಗಿ ದುಡಿಯುವ ಸಂಕಲ್ಪ

ಪುಟ 6 ಕ್ಕೆ ➢

ಮಹಾ ಸಂಸಾರ ಸಾಗರವನ್ನು ತಾನೇ ದಾಟಿರುವವನು ಗುರು. – ಸ್ವಾಮಿ ವಿವೇಕಾನಂದ

➢ ಪುಟ 7 ರಿಂದ.....

ಮಾಡಿದವರೇ. ತಮ್ಮ ಸಂಕಲ್ಪ ಪೂರ್ತಿಗಾಗಿ ಅವರು ಮಾಡಿದ ತ್ಯಾಗ, ಬಲಿದಾನಗಳು ವರ್ಣಿಸಲಸದಳ, 'ಸಂಕಲ್ಪ ಮನುಷ್ಯನ ಬುದ್ಧಿ ಭಾವಗಳಿಗೆ ಶಕ್ತಿ ತುಂಬುತ್ತದೆ. ಅದರ ಆಧಾರದ ಮೇಲೆ ವ್ಯಕ್ತಿ ಮೇಲೇರಬಲ್ಲ. ಅದಕ್ಕಾಗೇ ವಿದ್ಯಾರ್ಥಿಗಳು ಈ ಸಮಾರಂಭದಲ್ಲಿ 'ವೃತ್ತಿ ಜೀವನವನ್ನು ಪ್ರೇಶಿಸಿದ ನಂತರ, ಹೆತ್ತ ತಂದೆ ತಾಯಿಗಳನ್ನು, ಓದಿದ ಶಾಲೆಯನ್ನು, ಬೆಳೆಸಿದ ಸಮಾಜವನ್ನು ಮರೆಯದೆ, ಅವರ ಸಂತೃಪ್ತಿಗಾಗಿ ಹಾಗೂ ಸ್ವಂತ ಹಿತಕ್ಕಿಂತ ದೇಶಹಿತ ಮುಖ್ಯವೆಂದು ಭಾವಿಸುವೆ' ಎಂದು ಎಲ್ಲ ಅತಿಥಿಗಳೆದುರು ಸಂಕಲ್ಪ ಮಾಡುತ್ತಾರೆ. ಈ ಸಂಕಲ್ಪವನ್ನು ಬೋಧಿಸವವರೂ ಜೀವನದಲ್ಲಿ ಅಂಥದ್ದೇ ವ್ಯಕ್ತಿಗಳಾಗಿರುತ್ತಾರೆ.

## ಪ್ರಶಸ್ತಿ ಪತ್ರ

ನಾವು ಕೊಡುವ ಪ್ರಶಸ್ತಿ ಅಂತಿಂಥದ್ದಲ್ಲ. ವಿದ್ಯಾರ್ಥಿಗಳ ಬಳಿ ಶಾಶ್ವತವಾಗಿ ಉಳಿಯುವಂಥದ್ದು. ಅದರ ಒಂದು ಬದಿ ಅವನ ಸಾಧನೆಯ ಮಾಹಿತಿ ಇದ್ದಲ್ಲಿ, ಹಿಂಬದಿಯಲ್ಲಿ ಸ್ವಾಮಿ ವಿವೇಕಾನಂದರ ಭಾವಚಿತ್ರದೊಂದಿಗೆ ತರುಣರಿಗೆ ಅವರು ನೀಡಿದ ಕರೆಯನ್ನು ಮುದ್ರಿಸಲಾಗಿರುತ್ತದೆ. ಇಷ್ಟೇ ಅಲ್ಲ, ಆಗಷ್ಟೇ ಸಮಾರಂಭದಲ್ಲಿ ಅವರು ಸ್ವೀಕರಿಸಿದ ಸಂಕಲ್ಪವನ್ನು ಸಹ ಮುದ್ರಿಸಲಾಗಿರುತ್ತದೆ. ವಿದ್ಯಾರ್ಥಿಗೆ ಪ್ರಶಸ್ತಿ ಪತ್ರ, ಸದಾ ತಾನು ಸ್ವೀಕರಿಸಿದ ಸಂಕಲ್ಪವನ್ನು ನೆನಪಿಸುತ್ತದೆ.

## ಸ್ಮರಣಿಕೆ

ವಿದ್ಯಾರ್ಥಿಗೆ ನೀಡಲಾಗುವ ಸ್ಮರಣಿಕೆಯೂ ವಿಶೇಷತೆಯಿಂದ ಕೂಡಿರುವುದೊಂದು ಹೆಚ್ಚುಗಾರಿಕೆ. ಉದಾಹರಣೆಗೆ 2007ರಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನೆನಪಿಗಾಗಿ ಅಂದಿನ ಕ್ರಾಂತಿಕಾರಿಗಳ ಚಿತ್ರವನ್ನು ಒಳಗೊಂಡದ್ದು, ಭಗತ್‌ಸಿಂಗ್‌ನ 100ನೇ ಜನ್ಮ ದಿನಕ್ಕೆ ಆತನ ಚಿತ್ರವನ್ನೊಳಗೊಂಡ, ಕಳೆದ ವರ್ಷ ಕೃಷ್ಣ ದೇವರಾಯನ 500ನೇ ರಾಜ್ಯೋತ್ಸವಕ್ಕೆ ಆತನ ಭಾವಚಿತ್ರವಿದ್ದ ಸ್ಮರಣಿಕೆ ಹೀಗೆ ನಾವು ಕೊಡುವ ಸ್ಮರಣಿಕೆಯೂ ವಿದ್ಯಾರ್ಥಿಯ ಬಾಳಿಗೆ ಪ್ರೇರಣೆ ನೀಡಬೇಕೆಂದು ನಮ್ಮ ಹಂಬಲ.

## ಹೊಸ ಆಯಾಮ

20 ವರ್ಷ ಕೇವಲ ಶಾಲಾ ಪ್ರಥಮಿಗರನ್ನು ಸನ್ಮಾನಿಸುತ್ತಿದ್ದ ಈ ಕಾರ್ಯಕ್ರಮಕ್ಕೆ ಅನೇಕ ಹೊಸ ಆಯಾಮಗಳನ್ನು ಸೇರಿಸಿದೆವು. ಅನೇಕ ವಿದ್ಯಾರ್ಥಿಗಳು ಶೇಕಡಾ 80, 90 ಅಂಕ ಗಳಿಸಲಾಗದೆ ಶಾಲಾ ಪ್ರಥಮಿಗರಾಗುತ್ತಿರಲಿಲ್ಲ. ಆದರೆ ಪ್ರತಿಭೆಯ ಇತರ ಪ್ರಕಾರಗಳಾದ ಕಲೆ, ಸಾಹಿತ್ಯ, ನೃತ್ಯ, ಸಂಗೀತ ಮತ್ತು ಆಟೋಟಗಳಲ್ಲಿ ಅತಿ ಹೆಚ್ಚಿನ ಸಾಧನೆ ಮಾಡುತ್ತಿದ್ದು ಅವರಲ್ಲಿ ಅನೇಕರು ರಾಷ್ಟ್ರ ಮಟ್ಟದಲ್ಲೂ ಮಿಂಚುತ್ತಿದ್ದರು. ಹೀಗಾಗಿ 20ನೇ ವರ್ಷದ ಸ್ಮರಣೆಗೆಂದು ಅಂಥ ಬಾಲ ಪ್ರತಿಭೆಗಳನ್ನು ಸನ್ಮಾನಿಸುವುದನ್ನು ಪ್ರಾರಂಭಿಸಿದೆವು. ಕಲಾ ಪ್ರತಿಭೆಗಳಲ್ಲಿ ಕಲೆ– ಮನರಂಜನೆಗಲ್ಲ, ಆತ್ಮವಿಕಾಸಕ್ಕಾಗಿ' ಎಂಬ ಭಾವ ಬಿತ್ತಿದೆವು. ಹಾಗೆಯೇ 'ಕ್ರೀಡೆ ವೈಯಕ್ತಿಕ ಸಾಧನೆಗಲ್ಲ– ತಂಡದ ಸಾಧನೆಗಾಗಿ' ಎಂಬ ಮನೋಭಾವವನ್ನು ಮೂಡಿಸಿದೆವು.

ಇದೇ ಸಮಯದಲ್ಲಿ ಮತ್ತೆರಡು ಹೊಸ ಅಂಶಗಳನ್ನು ಸೇರಿಸಲಾಯ್ತು. ಸಮಾಜದಲ್ಲಿ ಅಪಹಾಸ್ಯಕ್ಕೆ ಒಳಗಾಗುವ ವಿಕಲಚೇತನ ವಿದ್ಯಾರ್ಥಿಗಳಲ್ಲಿ ಪ್ರತಿಭೆಗೇನೂ ಕಡಿಮೆ ಇರುವುದಿಲ್ಲ. ಅವರಲ್ಲನೇಕರು ಶೇಕಡಾ 85–90 ಅಂಕ ಗಳಿಸಿದವರೂ ಇದ್ದಾರೆ. ಇಂಥವರನ್ನು ಗುರುತಿಸಿ ಸನ್ಮಾನಿಸುವ ಯೋಚನೆ ಮಾಡಲಾಯ್ತು. ಕಳೆದ ನಾಲ್ಕು ವರ್ಷಗಳಲ್ಲಿ ಇಂಥ ವಿದ್ಯಾರ್ಥಿಗಳೂ ಭಾಗವಹಿಸಿದ್ದಾರೆ. ಇಂಥವರನ್ನು ಎಲ್ಲರಿಗಿಂತ ಮೊದಲು ಪ್ರಾರಂಭದಲ್ಲೇ ಸನ್ಮಾನಿಸುವ ಸಂಪ್ರದಾಯ ಹಾಕಿ, ಅವರಲ್ಲಿ ಆತ್ಮವಿಶ್ವಾಸವನ್ನು ಒಡಮೂಡಿಸುವುದಷ್ಟೇ ಅಲ್ಲ ಅವರು ಮಿಕ್ಕ ವಿದ್ಯಾರ್ಥಿಗಳಿಗೆ ಯಾವ ರೀತಿಯೂ ಕಮ್ಮಿ ಇರುವುದಿಲ್ಲ ಎಂಬುದನ್ನು ಸಮಾಜಕ್ಕೆ ತಿಳಿಸಿ ಕೊಡುವ ನಮ್ಮ ಪ್ರಯತ್ನ ಸಫಲವಾಯಿತು.

## ಶಿಕ್ಷಕರ ಮಕ್ಕಳು

ನಮ್ಮದು ಶಿಕ್ಷಕ ಸಂಘಟನೆ. ಶಿಕ್ಷಕರ ಮಕ್ಕಳಲ್ಲೂ ಪ್ರತಿಭಾವಂತರನ್ನು ಗುರುತಿಸಿ, 'ಪಂಡಿತಪುತ್ರಾಃ ಶುಂಠಾಃ' ಎಂಬ ಲೌಕಿಕ ವ್ಯವಹಾರದ ಮಾತನ್ನು ಸುಳ್ಳು ಮಾಡಬೇಕೆಂಬ ಇಚ್ಛೆ ನಮ್ಮದು. ಶಾಲಾ ಪ್ರಥಮಿಗರಲ್ಲದಿದ್ದರೂ ಶೇಕಡಾ 90ಕ್ಕಿಂತ ಅಧಿಕ ಅಂಕ ಗಳಿಸಿದ ಎಲ್ಲ ವರ್ಗದ ಶಿಕ್ಷಕರ ಮಕ್ಕಳನ್ನೂ ಆ ಶಿಕ್ಷಕರೊಟ್ಟಿಗೆ ಸನ್ಮಾನಿಸುತ್ತಾ ಬಂದಿದ್ದೇವೆ. ಹೀಗೆ ಈ 35 ವರ್ಷಗಳಲ್ಲಿ 'ಪ್ರತಿಭಾ ಪುರಸ್ಕಾರ' ಅನೇಕ ಹೊಸ ಹೊಸ ಆಯಾಮಗಳಲ್ಲಿ ಹೊರ ಹೊಮ್ಮಿದೆ.

## ಸಾರ್ಥಕ್ಯ

ಕಳೆದ 35 ವರ್ಷಗಳಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಈ ಸಮಾರಂಭದಲ್ಲಿ ಪುರಸ್ಕೃತರಾಗಿದ್ದಾರೆ. ಅನೇಕರು ಸಮಾರಂಭದಲ್ಲಿ, ಆ ನಂತರವೂ ತಮ್ಮ ಹೃದಯದ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಸರ್ಕಾರಿ ಪ್ರೌಢಶಾಲೆಯಿಂದ ಶೇ 60 ಗಳಿಸಿದ್ದ ವಿದ್ಯಾರ್ಥಿಯೊಬ್ಬ ದ್ವಿತೀಯ ಪಿ.ಯು.ಸಿಯಲ್ಲಿ 85% ಅಂಕ ಗಳಿಸಿದ. ಅವನನ್ನು ಅಂಕ ಗಳಿಸಲು ಸಿಕ್ಕಿದ ಪ್ರೇರಣೆಯಾದರೂ ಏನೆಂದು ಕೇಳಿದಾಗ ಅವನು "ನನಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದವರು, 'ಪ್ರತಿಭಾ ಪುರಸ್ಕಾರ' ದಲ್ಲಿ ಸನ್ಮಾನಿಸಿ, ಪ್ರೋತ್ಸಾಹಿಸಿದ್ದೇ ಈ ನನ್ನ ಸಾಧನೆಗೆ ಪ್ರೇರಣೆ" ಎಂದು ನುಡಿದದ್ದು ಮಾತ್ರ ಹೃದಯಸ್ಪರ್ಶಿ. ಅವನ ಹಾಗೂ ಅವನಂಥ ಇತರರ ಇಂಥ ಅನಿಸಿಕೆಗಳು ನಮಗೆ ಸಾರ್ಥಕ್ಯದ ಭಾವ ಮೂಡಿಸಿದೆ.

## ಕೃತಜ್ಞತೆ

ಗಂಗೋತ್ರಿಯಲ್ಲಿ ಝರಿಯಾಗಿ ಹುಟ್ಟಿ ಗಂಗಾಸಾಗರದ ಬಳಿ ವಿಶಾಲಹರಿವು ಕಂಡುಕೊಂಡ ಗಂಗೆಯಂತೆ, ಪ್ರಾರಂಭದ ವರ್ಷ 40 ವಿದ್ಯಾರ್ಥಿಗಳನ್ನು ನ್ಯಾಷನಲ್ ಕಾಲೇಜಿನ ಕೊಠಡಿಯೊಂದರಲ್ಲಿ ಸನ್ಮಾನಿಸಿದ್ದ ಈ ಕಾರ್ಯಕ್ರಮ ಈ 35 ವರ್ಷಗಳಲ್ಲಿ ರಾಜ್ಯಾದ್ಯಂತ ನೂರಾರು ವಿದ್ಯಾರ್ಥಿಗಳನ್ನು ಸನ್ಮಾನಿಸುವ ಹಂತಕ್ಕೆ ತಲುಪಿದೆ. ಈ ಸಂಖ್ಯೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲು, ಕಾರ್ಯಕ್ರಮವನ್ನು ಆಯೋಜಿಸಲು ಅಗಾಧ ಸಂಪನ್ಮೂಲದ ಅಗತ್ಯವಿದ್ದೇ ಇದೆ. ನಮ್ಮ ಸಮಾಜದಲ್ಲಿ ಉತ್ತಮ ಕೆಲಸಗಳನ್ನು ಬೆಂಬಲಿಸಿ, ಬೆನ್ನು ಚಪ್ಪರಿಸುವವರಿಗೆ ಖಂಡಿತ ಕೊರತೆ ಇರುವುದಿಲ್ಲ ಎಂಬ ದೃಢವಿಶ್ವಾಸದಿಂದ ಹೊರಟಾಗ, ನಮ್ಮ ನಂಬಿಕೆಯನ್ನು ಸುಳ್ಳು ಮಾಡದೆ ನಮ್ಮ ಜತೆಗೆ ನಿಂತವರು ಹಲವರು. ಕಳೆದ ಹತ್ತಾರು ವರ್ಷಗಳಿಂದ ಮಾರ್ಚ್ ತಿಂಗಳಲ್ಲೇ ನಿಮ್ಮ ಕಾರ್ಯಕ್ರಮ ಯಾವಾಗ ಎಂದು ದೂರವಾಣಿ ಮೂಲಕ ಪ್ರಶ್ನಿಸುವವರು ಕೆಲವರು. ಸರ್ಟಿಫಿಕೇಟ್ ಕೊಡುತ್ತಿದ್ದಾಗ ಅದನ್ನು ಲ್ಯಾಮಿನೇಟ್ ಮಾಡಿ ಚಂದಗೊಳಿಸಿ ಎಂಬ

ಪುಟ 10 ಕ್ಕೆ ➢

➢ ಪುಟ 6 ರಿಂದ.....

ಪ್ರಗತಿಪರ ಚಿಂತನೆಗಳನ್ನು ಹೊಂದಿದ್ದ ರಾಸ್ಮಣಿ ವಿಧವಾ ಪುನರ್ವಿವಾಹಕ್ಕಾಗಿ ಸಾಮಾಜಿಕ ಕಾರ್ಯಕರ್ತ, ವಿದ್ವಾಂಸ ಈಶ್ವರಚಂದ್ರವಿದ್ಯಾಸಾಗರ್ ನಡೆಸುತ್ತಿದ್ದ ಅಭಿಯಾನವನ್ನು ಬೆಂಬಲಿಸಿದ್ದಳು. ಆ ಸಮಯದಲ್ಲಿ ಆಡಳಿತವನ್ನು ನಡೆಸುತ್ತಿದ್ದ ಈಸ್ಟ್ ಇಂಡಿಯಾ ಕಂಪೆನಿಗೆ ಬಹುಪತ್ನಿತ್ವದ ವಿರುದ್ಧ ಕರಡು ಮಸೂದೆಯನ್ನು ಸಹ ಸಲ್ಲಿಸಿದ್ದಳು.

ಈಡನ್ ಗಾರ್ಡನ್ಸ್ ಇವರ ಜಮೀನ್ದಾರಿ ಪ್ರದೇಶದ ಒಂದು ಭಾಗವೇ ಆಗಿತ್ತು. ಅದನ್ನು ಭಾರತದ ಗವರ್ನರ್ ಜನ್ರಲ್ ಆಗಿದ್ದ ಲಾರ್ಡ್ ಆಕ್ಲೆಂಡ್‌ನ ಈಡನ್ ಸಹೋದರಿಯರಿಗೆ ಉಡುಗೊರೆಯಾಗಿ ನೀಡಿದ್ದಳು. ಹೀಗೆ ಹತ್ತಾರು ಜನ ಪರ ಕಾರ್ಯಗಳನ್ನು ನಡೆಸುವ ಮೂಲಕ 'ರಾಣಿ' ಎಂಬ ಹೆಸರಿಗೆ ತಾನು ಅರ್ಹಳೆಂಬುದನ್ನು ಸಾಬೀತುಪಡಿಸಿದಳು. 1861 ರ ಫೆಬ್ರವರಿ 19 ರಂದು ನಿಧನಳಾದ ರಾಣಿರಾಸ್ಮಣಿಯ ಗೌರವಾರ್ಥವಾಗಿ ಕೋಲ್ಕತ್ತದ ಅನೇಕ ಪ್ರದೇಶಗಳಲ್ಲಿ ಹಲವಾರು ಸ್ಮಾರಕಗಳನ್ನು ನಿರ್ಮಿಸಲಾಗಿದೆ. ಜಾನ್ ಬಜಾರ್ ನಲ್ಲಿರುವ ಈಕೆಯ ಪೂರ್ವಜರ ಮನೆಯ ಸಮೀಪದ ರಸ್ತೆಗೆ ರಾಣಿರಶ್ಮೋನಿರಸ್ತೆ ಎಂದು ಹೆಸರಿಡಲಾಗಿದೆ. ದಕ್ಷಿಣೇಶ್ವರದಲ್ಲಿ ಈಕೆಯ ಹೆಸರಿನ ರಸ್ತೆಯಿದೆ. ರಾಣಿರಶ್ಮೋನಿಘಾಟ್ ಎಂದು ಕರೆಯಲ್ಪಡುವ ಫೆರ್ರಿಘಾಟ್ ಅನ್ನು ಪಶ್ಚಿಮ ಬಂಗಾಳದ ಬ್ಯಾರಕ್ಪೋರ್ ಮತ್ತು ಪಶ್ಚಿಮ ಬಂಗಾಳ ಹೂಗ್ಲಿಯಲ್ಲಿ ದೋಣಿಸೇವೆಗಳಿಗಾಗಿ ನಿರ್ಮಿಸಲಾಗಿದೆ. ಭಾರತೀಯಕೋಸ್ಟ್ ಗಾರ್ಡ್‌ನ ಐದು ವೇಗದ ಗಸ್ತು ನೌಕೆಗಳಲ್ಲಿ ಒಂದಕ್ಕೆ ರಾಣಿರಶ್ಮೋನಿಯ ಹೆಸರನ್ನು ಇಡಲಾಗಿದೆ.

ರಾಣಿರಾಸ್ಮಣಿ ವಂಗ ದೇಶದ ಬಡಕುಟುಂಬದಲ್ಲಿ ಜನಿಸಿ ಶ್ರೀಮಂತನ ಕೈಹಿಡಿದು ಅಪಾರ ಸಂಪತ್ತಿನ ಒಡತಿಯಾದರೂ ಸುಸಂಸ್ಕೃತ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡವಳು. ದೀನ ದಲಿತರ ಸೇವೆಯನ್ನು ಮಾಡುತ್ತ, ತನ್ನದಾದ ಐಶ್ವರ್ಯವನ್ನು ಸದ್ವಿನಿಯೋಗ ಮಾಡುತ್ತ, ದಾನ ಧರ್ಮದ ಮೂಲಕ ಜನ ಹಿತಕಾರ್ಯಗಳಲ್ಲಿ ತೊಡಗಿದ್ದವಳು. ದೇಶದ ಗೌರವಕ್ಕೆ ಧಕ್ಕೆಯುಂಟಾದ ಸಂದರ್ಭದಲ್ಲಿ ಧೀರತನದಿಂದ ಎದುರಿಸಿ ಭಾರತೀಯರ ಸ್ವಾಭಿಮಾನವನ್ನು, ಪೌರುಷವನ್ನು ನಿರೂಪಿಸಿದವಳು. ದೈವಭಕ್ತಳಾಗಿ ಕಾಳಿಕಾಮಂದಿರವನ್ನು ನಿರ್ಮಿಸಿ ರಾಮಕೃಷ್ಣರ ತಪೋಭೂಮಿಯನ್ನು ಸಿದ್ಧಗೊಳಿಸಿದವಳು.

ಬಂಗಾಳದ ಈ ಹೆಣ್ಣು ಮಗಳು ಭಾರತೀಯ ನಾರಿಯ ಧೀಮಂತಿಕೆಗೂ ಔದಾರ್ಯದ ಗುಣಕ್ಕೂ ಕುಶಾಗ್ರಮತಿಗೂ ಕಾರ್ಯದಕ್ಷತೆಗೂ ನಿಸ್ವಾರ್ಥ ಮನೋಭಾವಕ್ಕೂ ಸಾಕ್ಷೀಭೂತವೆನಿಸಿ ಕೊಂಡಿದ್ದಾಳೆ. ಒಂದೂವರೆ ಶತಮಾನವೇ ಕಳೆದಿದ್ದರೂ ಇತಿಹಾಸದ ಪುಟಗಳಲ್ಲಿ ಈಕೆಯ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ. ●

➢ ಪುಟ 9 ರಿಂದ.....

ಸಲಹೆ ನೀಡಿ ಕಾರ್ಯಗತ ಮಾಡಿದವರು, ನಿಮ್ಮಕಲ್ಪನೆ, ಯೋಜನೆ ಜನ ಮೆಚ್ಚುವಂಥದು ನಿಮ್ಮ ಅಗಾಧ ಪ್ರಯತ್ನಕ್ಕೆ ನಮ್ಮ ಅಳಿಲ ಸೇವೆ ಇರಲಿ ಎಂದು ಸಹಾಯ ಹಸ್ತ ಚಾಚುವ ಮಕ್ಕಳ ಪೋಷಕರು, ತಾವಲ್ಲದೆ ತಮ್ಮ ಗೆಳೆಯರನ್ನೂ ದಾನಿಗಳಾಗಿಸಿದವರು, ಕಾರ್ಯಕ್ರಮದ ಯೋಜನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು, ಇಂಥವರನ್ನೆಲ್ಲಾ ನೆನೆದಾಗ ಕಣ್ಣಾಲಿಗಳು ತುಂಬುತ್ತದೆ. ಇಂಥವರ ಸಂತತಿ ಸಾವಿರವಾಗಲಿ ಎಂಬುದೊಂದೇ ಪರಮಾತ್ಮನಲ್ಲಿ ನಮ್ಮ ಪ್ರಾರ್ಥನೆ. ●

# ಏಕಾತ್ಮತಾಸ್ತೋತ್ರ

■ **ಚಾರುಮತಿ**

**ಶ್ರೀರಾಮೋ ಭರತಃ ಕೃಷ್ಣೋ । ಭೀಷ್ಮೋ ಧರ್ಮಸ್ತಥಾರ್ಜುನಃ।**
**ಮಾರ್ಕಂಡೇಯೋ ಹರಿಶ್ಚಂದ್ರ । ಪ್ರಹ್ಲಾದೋ ನಾರದೋ ಧ್ರುವಃ॥**
**ಹನುಮಾನ್ ಜನಕೋ ವ್ಯಾಸೋ। ವಸಿಷ್ಠಶ್ಚ ಶುಕೋ ಬಲಿಃ।**
**ದಧೀಚಿ ವಿಶ್ವಕರ್ಮಾಣೌ। ಪೃಥು ವಾಲ್ಮೀಕಿ ಭಾರ್ಗವಃ॥**
**ಭಗೀರಥಶ್ಚೈಕಲವ್ಯೋ। ಮನುರ್ಧನ್ವಂತರಿಸ್ತಥಾ।**
**ಶಿಬಿಶ್ಚ ರಂತಿದೇವಶ್ಚ। ಪುರಾಣೋದ್ಗೀತಕೀರ್ತಯಃ॥**
**ಬುದ್ಧ ಜಿನೇಂದ್ರ ಗೋರಕ್ಷಃ। ಪಾಣಿನಿಶ್ಚ ಪತಂಜಲಿಃ।**
**ಶಂಕರೋ ಮಧ್ವ ನಿಂಬಾರ್ಕೌ। ಶ್ರೀ ರಾಮಾನುಜ ವಲ್ಲಭೌ॥**

ಪುಣ್ಯಭೂಮಿ ಭಾರತದ ನೆಲದಲ್ಲಿ ಜನಿಸಿ ಲೋಕಕಲ್ಯಾಣದ ಕಾರ್ಯದಲ್ಲಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಬದುಕಿದ ಅನೇಕ ಸ್ತ್ರೀಯರ ಆದರ್ಶಮಯ ಚರಿತ್ರೆಗಳನ್ನು ನಮ್ಮ ಇತಿಹಾಸದ ಪುಟಗಳಲ್ಲಿ ಕಾಣುತ್ತೇವೆ. ಅದೇ ರೀತಿ ಮಾತೃಭೂಮಿಯ ರಕ್ಷಣೆಗಾಗಿ ಹೋರಾಡುತ್ತ ಹುತಾತ್ಮರಾದ ಮಹಿಳೆಯರ ಹಾಗೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ತಮ್ಮದೇ ಆದ ಸಾಮರ್ಥ್ಯದಿಂದ ಪೂಜ್ಯಸ್ಥಾನವನ್ನು ಪಡೆದುಕೊಂಡಿರುವ ಸ್ತ್ರೀರತ್ನಗಳ ವಿವರವನ್ನೂ ಸಹ ನಮ್ಮ ಪುರಾಣಗಳ ಮೂಲಕ ತಿಳಿಯುತ್ತೇವೆ. ಹಾಗೆಯೇ ನಮ್ಮ ದೇಶದ ಸಂಸ್ಕೃತಿಯ ಜೀವನಾಡಿಗಳೆನಿಸಿರುವ ರಾಮಾಯಣ ಮತ್ತು ಮಹಾಭಾರತದ ಗ್ರಂಥಗಳಲ್ಲಿ ಬಿಂಬಿಸಿರುವ ಸಾರ್ವಕಾಲಿಕವಾದ ಜೀವನಮೌಲ್ಯಗಳನ್ನು ಸಾರುವ ಪಾತ್ರಗಳು ನಮಗೆ ಎಂದಿಗೂ ಸ್ಮರಣೀಯವಾದುದು.

'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ' ಎಂದು ಸಾರಿದ ನುಡಿಯಂತೆ ಮಹಾವಿಷ್ಣುವಿನ ಅವತಾರಗಳಾದ ಶ್ರೀರಾಮಚಂದ್ರ, ಕೃಷ್ಣ, ಭಾರ್ಗವರು ದುಷ್ಟಶಿಕ್ಷಣ, ಶಿಷ್ಟ ರಕ್ಷಣ ಮಾಡಿದಂತೆಯೇ, ಆ ಕಾರ್ಯದಲ್ಲಿ ತಮ್ಮತಮ್ಮ ಅಳಿಲು ಸೇವೆಯನ್ನು ಮಾಡಿದ ಧರ್ಮಪರರಾದ ಅನೇಕ ರಾಜರನ್ನು ಸಹ ಸ್ಮರಿಸಬೇಕಾದುದು ಅತ್ಯವಶ್ಯ. ಆ ಸಾಲಿನಲ್ಲಿ ಬರುತ್ತಾರೆ, ಧರ್ಮರಾಜ, ಅರ್ಜುನ, ಹರಿಶ್ಚಂದ್ರ, ಧ್ರುವ, ಜನಕರಾಜ, ಪೃಥು, ಭಗೀರಥ ಪ್ರಹ್ಲಾದ ಮನು ಎಂಬ ಅರಸರು.

ಇನ್ನು ಲೋಕಕಲ್ಯಾಣದ ಕಾರ್ಯದಲ್ಲಿ ತಮ್ಮ ಕರ್ತವ್ಯವನ್ನು ನಿಸ್ವಾರ್ಥವಾಗಿ ಮಾಡಿದ ಋಷಿಮುನಿಗಳಾದ ವಸಿಷ್ಠ, ಮಾರ್ಕಂಡೇಯ, ದಧೀಚಿ, ವ್ಯಾಸ, ಶುಕ, ವಾಲ್ಮೀಕಿ, ಶಂಕರರು, ಮಧ್ವರು, ರಾಮಾನುಜರು ಸದಾಕಾಲಕ್ಕೂ ಪೂಜನೀಯರೇ ಆಗಿದ್ದಾರೆ. ಅದೇ ರೀತಿಯಲ್ಲಿ ದಾನಗುಣಕ್ಕೆ ಹೆಸರಾದ ಶಿಬಿ ಚಕ್ರವರ್ತಿ, ಔಷಧೀಗಳ ಜನಕನಾದ ಧನ್ವಂತರಿ, ಗುರಿಸಾಧನೆಗೆ ಬೇಕಾದ ಛಲ ಮತ್ತು ನಿರಂತರ ಪ್ರಯತ್ನದ ಪ್ರತೀಕವಾದ ಭಗೀರಥ, ಸ್ಮರಣೀಯರೆನಿಸಿದ್ದಾರೆ.

ಇನ್ನು ಯೋಗಶಾಸ್ತ್ರ ಪ್ರವೀಣ ಪತಂಜಲಿ ಮುನಿ, ವಯ್ಯಾಕರಣಿ ಪಾಣಿನಿ, ಅಹಿಂಸಾಧರ್ಮವನ್ನು ಉಪದೇಶಿಸಿದ ಜಿನೇಂದ್ರ, ಬದುಕಿನ ರಹಸ್ಯವನ್ನು ತಿಳಿಸಿ ಜ್ಞಾನೋಪದೇಶ ನೀಡಿದ ಬುದ್ಧ, ಆದರ್ಶ ಶಿಷ್ಯನಾದ ಏಕಲವ್ಯ ಮುಂತಾದ ಹಲವಾರು ವೀರಪುರುಷರು, ಜ್ಞಾನಿಗಳು, ಜನಿಸಿ ಪಾವನಗೊಳಿಸಿರುವ ಭರತಭೂಮಿಯ ಪುಣ್ಯವಿಶೇಷವನ್ನು ನೆನೆದು ಧನ್ಯರಾಗೋಣ. ●

# ರಾಜ್ಯ ಕಾರ್ಯಕಾರಿಣಿ ಮತ್ತು ಸಾಮಾನ್ಯಸಭೆಯ ವರದಿ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕೇಂದ್ರ ಕಾರ್ಯಾಲಯ ಯಾದವಸ್ಮೃತಿ, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿ ರಾಜ್ಯ ಕಾರ್ಯಕಾರಣಿ ಮತ್ತು ಸಾಮಾನ್ಯ ಸಭೆಯು ದಿನಾಂಕ 9–7–2023 ರಂದು ಭಾನುವಾರ ನಡೆಯಿತು. ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಸರಸ್ವತಿ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಪ್ರಾರಂಭವಾಯಿತು.

ಸರಸ್ವತಿಯ ಪ್ರಾರ್ಥನೆಯನ್ನು ರಾಜ್ಯದ ಉಪಾಧ್ಯಕ್ಷರಾದ ಶ್ರೀಮತಿ ರೋಹಿಣಿ ನಾಯಕ್ ಇವರು ಮಾಡಿದರು. ಸಭೆಯಲ್ಲಿರುವ ಎಲ್ಲರನ್ನು ರಾಜ್ಯ ಸಹ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಗಂಗಾಧರಾಚಾರಿ ಅವರು ಸ್ವಾಗತಿಸಿ, ಪರಿಚಯಿಸಿದರು. ನಂತರ ಜಿಲ್ಲೆಗಳಿಂದ ಬಂದಿರುವ ಪ್ರತಿನಿಧಿಗಳ ಪರಿಚಯವನ್ನು ಜಿಲ್ಲಾಶಃ ಮಾಡಲಾಯಿತು. ಹಿಂದಿನ ಸಭೆಯ ನಡಾವಳಿಯನ್ನು ಸಭೆಯ ಗಮನಕ್ಕೆ ತಂದು ಅನುಮೋದನೆಯನ್ನು ಪಡೆಯಲಾಯಿತು. ರಾಜ್ಯ ಖಜಾಂಚಿಗಳಾದ ಜೆ.ಎಂ ಜೋಷಿಯವರು ಕಳೆದ ಸಾಲಿನ ಲೆಕ್ಕ ಪತ್ರವನ್ನು ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದರು.

ಸಭೆಯಲ್ಲಿ ಜಿಲ್ಲೆಯ ಪ್ರಮುಖರು ಕಳೆದ ಕಾರ್ಯಕಾರಿಣಿಯಿಂದ ಇಲ್ಲಿಯವರೆಗೆ ನಡೆದ ಕಾರ್ಯಕ್ರಮಗಳ ವರದಿಯನ್ನು ಸಭೆಯ ಗಮನಕ್ಕೆ ತಂದರು. ಇದರಲ್ಲಿ ವಿಶೇಷವಾಗಿ ಫೋನ್‌ಇನ್ ಕಾರ್ಯಕ್ರಮ, ರಜಾ ಕಾಲದ ಚಟುವಟಿಕೆಗಳು, ಶಿಕ್ಷಕರ ಮತ್ತು ಶೈಕ್ಷಣಿಕ ಸಮಸ್ಯೆಗಳಿಗೆ ಸ್ಪಂದನೆ, ಯೋಗ ದಿನಾಚರಣೆ ಹಾಗೂ ಗುರುವಂದನಾ ಕಾರ್ಯಕ್ರಮದ ವರದಿಗಳನ್ನು ಮಂಡಿಸಿದರು. ನಂತರ ನೂತನ ರಾಜ್ಯ ಕಾರ್ಯಕಾರಣಿ ರಚನೆಯನ್ನು ಮುಂದಿನ ಸಾಮಾನ್ಯ ಸಭೆಯವರೆಗೆ ಮುಂದೂಡಲು ಅಧ್ಯಕ್ಷರು ಸಭೆಯ ಮುಂದಿಟ್ಟು, ಅನುಮೋದನೆ ಪಡೆಯಲಾಯಿತು. ಅಲ್ಲಿಯವರೆಗೂ ಈಗಿರುವ ಕಾರ್ಯಕಾರಣಿ ಸದಸ್ಯರನ್ನು ಮುಂದುವರೆಸಲು ಸಭೆಯು ತೀರ್ಮಾನಿಸಿತು.

2023–24ನೇ ಸಾಲಿನಲ್ಲಿ ಸಂಘಟನಾತ್ಮಕ ಮತ್ತು ವಿಸ್ತಾರದ ದೃಷ್ಟಿಯಿಂದ ವಾರ್ಷಿಕ ಯೋಜನೆಯನ್ನು ಪ್ರಧಾನ ಕಾರ್ಯದರ್ಶಿಗಳಾದ ಚಿದಾನಂದ ಪಾಟೀಲ್ ಸಭೆಯಲ್ಲಿ ಮಂಡಿಸಿ, ಸಭೆಯ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ವಾರ್ಷಿಕ ಯೋಜನೆಗೆ ಸಭೆಯ ಅನುಮೋದನೆ ಪಡೆದರು.

ಶಿಕ್ಷಕರ ಮತ್ತು ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಿತು. ಜಿಲ್ಲೆಯ ಪ್ರತಿನಿಧಿಗಳಿಂದ ಸಮಸ್ಯೆಗಳನ್ನು ಆಲಿಸಿ ಪಟ್ಟಿಮಾಡಿ, ಸಂಘದ ಪ್ರಯತ್ನದ ಬಗ್ಗೆ ಮತ್ತು ಅವುಗಳನ್ನು ಪರಿಹರಿಸುವಲ್ಲಿ ನಮ್ಮ ಪ್ರಯತ್ನದ ಬಗ್ಗೆ ಮಾಜಿ ವಿಧಾನಸಭೆಯ ಪರಿಷತ್ ಸದಸ್ಯರಾದ ಶ್ರೀ ಅರುಣ ಶಹಾಪುರ ಅವರು ಹೇಳಿದರು. ಮಹಿಳಾ ಕಾರ್ಯದ ಬಗ್ಗೆ ಶ್ರೀಮತಿ ಸೀತಾಲಕ್ಷ್ಮೀಜಿ, ಪ್ರತಿಭಾ ಪರುಸ್ಕಾರದ ವಿಶೇಷತೆ ಮತ್ತು ಆಚರಣೆಯ ಬಗ್ಗೆ ಸಂಘದ ಹಿರಿಯ ಪೋಷಕರಾದ ಶ್ರೀ ಹೆಚ್ ನಾಗಭೂಷಣ್ ರಾವ್ ರವರು ಸಭೆಯ ಗಮನಕ್ಕೆ ತಂದರು.

ಕಾರ್ಯಕ್ಷೇತ್ರದಲ್ಲಿ ಉತ್ಸಾಹದಿಂದ ಮತ್ತು ಪ್ರೇರಣಾದಾಯಕವಾಗಿ ಕಾರ್ಯ ಮಾಡುವುದು ಹೇಗೆ ಮತ್ತು ಸಂಘದ ಚಟುವಟಿಕೆಗಳನ್ನು ವಿಸ್ತರಿಸುವ ದೃಷ್ಟಿಯಿಂದ ನಮ್ಮೆಲ್ಲರ ಕರ್ತವ್ಯಗಳೇನು ಎನ್ನುವುದರ ಬಗ್ಗೆ ಎಬಿಆರ್‌ಎಸ್‌ಎಂನ ರಾಷ್ಟ್ರೀಯ ಸಹ ಸಂಘಟನಾ ಮಂತ್ರಿಗಳಾದ ಶ್ರೀ.ಜಿ.ಲಕ್ಷ್ಮಣಜಿಯವರು ಸಭೆಗೆ ತಿಳಿಸಿದರು. ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು. ನಂತರ ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಟ್ರಪ್ಪನವರು ಶಾಂತಿ ಮಂತ್ರವನ್ನು ಹೇಳುವುದರೊಂದಿಗೆ ಸಭೆಯು ಸಂಪನ್ನಗೊಂಡಿತು.



ಈ ಕಾರ್ಯಕ್ರಮದಲ್ಲಿ ಎಬಿಆರ್‌ಎಸ್‌ಎಂನ ಮಹಿಳಾ ವಿಭಾಗದ ಕಾರ್ಯದರ್ಶಿಗಳಾದ ಶ್ರೀಮತಿ ಮಮತಾ ಡಿ.ಕೆ, ಕಾರ್ಯದರ್ಶಿಗಳಾದ ವೃಷಭೇಂದ್ರಸ್ವಾಮಿ, ಗುಂಡಾಚಾರ್, ರಾಜ್ಯದ ವಿಭಾಗ ಪ್ರಮುಖರು, ಜಿಲ್ಲೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಪ್ರಮುಖ ಕಾರ್ಯಕರ್ತರು ಮತ್ತು ಮಹಿಳಾ ಪ್ರಮುಖರು ಭಾಗವಹಿಸುವುದರೊಂದಿಗೆ ಸಭೆಯನ್ನು ಯಶಸ್ವಿಗೊಳಿಸಿದರು.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-07-2023 Date of Posting 20th or 21st of every month Posted at Periodical Rate

# ವಿವಿಧೆಡೆಗಳಲ್ಲಿ ನಡೆದ ಗುರುವಂದನಾ ಕಾರ್ಯಕ್ರಮ



ಬೆಂಗಳೂರು ದಕ್ಷಿಣ
ಕಲಬುರ್ಗಿ ಮತ್ತು ಧಾರವಾಡದಲ್ಲಿ ನಡೆದ ಕಾರ್ಯಕ್ರಮ







**ಗಮನಿಸಿ**

ಶಿಕ್ಷಕ ಸಮಾಚಾರದ ಹೊಸ ಸಂಚಿಕೆಯ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ಪ್ರತಿ ಸಂಚಿಕೆ 5ನೇ ತಾರೀಖಿನೊಳಗೆ akss1950@gmail.com Emailಗೆ ಕಳುಹಿಸಿಕೊಡಿ. ಉತ್ತಮ ಅನಿಸಿಕೆ, ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com